

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 08 Issue : 29 Sunday 05-10-2025 E-mail : maruti.b.hosamani76@gmail.com Page: 4 Price : Rs. 1/-


# ರಾಜ್ಯಕ್ಕೆ ಮಾದರಿ ಉಡುಪಿ, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಯವರ 'ರಜೆ ರಹಿತ ಸಮರ್ಪಣೆ' ಗೆ – ಸಾರ್ವಜನಿಕರ ಪ್ರಶಂಸೆ

**ಸಿಹಿ ಕಹಿ ಸುದ್ದಿ,**


**ಉಡುಪಿ :** ಕರಾವಳಿಯ ಕಲೆ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಗೆ ಹೆಸರಾದ ಉಡುಪಿ ಜಿಲ್ಲೆ, ಇದೀಗ ತನ್ನ ದಕ್ಷ ಆಡಳಿತಕ್ಕಾಗಿ ರಾಷ್ಟ್ರಮಟ್ಟದ ಪ್ರಶಂಸೆಗೆ ಪಾತ್ರವಾಗುತ್ತಿದೆ. ಜಿಲ್ಲಾಧಿಕಾರಿ (ಆಜರಿಣಣಥಿ ಅಂಟ–ಞುಂಟಿಜಡಿ – ಆಅ) ಸ್ವರೂಪ ಟಿ.ಕೆ., ಐ.ಎ.ಎಸ್. ಅವರ ನೇತೃತ್ವದಲ್ಲಿ, ಉಡುಪಿ ಜಿಲ್ಲಾಡಳಿತವು ಕಾನೂನು ಪಾಲನೆ, ಆಡಳಿತಾತ್ಮಕ ಪಾರದರ್ಶಕತೆ ಮತ್ತು ಸಾಂಸ್ಕೃತಿಕ ಪ್ರೋತ್ಸಾಹದ ಮೂಲಕ ಹೊಸ ಮಾನದಂಡಗಳನ್ನು ಸ್ಥಾಪಿಸಿದೆ. ಅವರ ಸಮಗ್ರ ಕಾರ್ಯವೈಖರಿಯು ಸರಕಾರಿ ಕರ್ತವ್ಯಗಳ ನಿಷ್ಠುರ ಪಾಲನೆಗೆ ಮಾದರಿಯಾಗಿದೆ.

**ಜಿಲ್ಲಾಧಿಕಾರಿಯ ಕರ್ತವ್ಯಗಳ ನಿಷ್ಠುರ ಪಾಲನೆ:–**

ದಕ್ಷ ಆಡಳಿತಕ್ಕೆ ಉದಾಹರಣೆ ಜಿಲ್ಲಾಧಿಕಾರಿಗಳು ಜಿಲ್ಲೆಯ ಆಡಳಿತಾತ್ಮಕ ಮತ್ತು ಕಂದಾಯ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ.ಯವರು ಈ ಎಲ್ಲ ಕರ್ತವ್ಯಗಳನ್ನು ನಿಷ್ಠೆಯಿಂದ ಪಾಲಿಸುತ್ತಿದ್ದಾರೆ ಎಂಬುದನ್ನು ಅವರ ಇತ್ತೀಚಿನ ಕಾರ್ಯವೈಖರಿ ಸ್ಪಷ್ಟಪಡಿಸುತ್ತದೆ.

**ಜಿಲ್ಲಾ ಮತ್ತು ತಾಲ್ಲೂಕು ಕಚೇರಿ ಭೇಟಿ:–**

ಜಿಲ್ಲಾಧಿಕಾರಿಯವರು ಇತ್ತೀಚೆಗೆ ಉಡುಪಿ ತಾಲ್ಲೂಕುಕಚೇರಿಗೆಭೇಟಿನೀಡಿ,ಆಡಳಿತಾತ್ಮಕ ಕಾರ್ಯಗಳ ಸುಗಮ ನಿರ್ವಹಣೆ ಮತ್ತು ಸಾರ್ವಜನಿಕರಿಗೆ ಸೇವೆಗಳು ಸಕಾಲದಲ್ಲಿ ತಲುಪುತ್ತಿರುವುದನ್ನು ಖಚಿತಪಡಿಸಿದ್ದಾರೆ. ಇದು ಕೇವಲ ಕಚೇರಿ ವೀಕ್ಷಣೆಯಲ್ಲ,



ಬದಲಿಗೆ ಸ್ಥಳೀಯ ಮಟ್ಟದಲ್ಲಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಅವರ ಬದ್ಧತೆಯನ್ನು ತೋರಿಸುತ್ತದೆ. ಎಲ್ಲಾ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದು–ಕೊಂಡು ಕರ್ತವ್ಯ ನಿರ್ವಹಣೆ ಪಾಲನೆ, ಸಿಬ್ಬಂದಿಗಳ ಜೊತೆ ಸಹಬಾಳ್ವೆಯನ್ನು ಅವರು ಕಾಪಾಡಿಕೊಂಡಿದ್ದಾರೆ. ಅವರು ಜನಸ್ನೇಹಿಯಾಗಿದ್ದಾರೆ.

**ಕಾನೂನು ಮತ್ತು ಸುವ್ಯವಸ್ಥೆ ಪಾಲನೆ:–**

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ.ಯವರು ಜಿಲ್ಲೆಯಲ್ಲಿ ಉತ್ತಮವಾದ ಕಾನೂನು ಪಾಲನೆಗೆ ಹೆಚ್ಚಿನ ಆದ್ಯತೆ ನೀಡಿ–ದ್ದಾರೆ. ಅಪರಾಧ ನಿಯಂತ್ರಣ, ಸಾರ್ವಜನಿಕ ಸುರಕ್ಷತೆ ಮತ್ತು ಕೋಮು ಸೌಹಾರ್ದತೆಯನ್ನು ಕಾಪಾಡುವಲ್ಲಿ ಅವರ ಕಾರ್ಯತಂತ್ರವು ಪ್ರಶಂಸೆಗೆ ಪಾತ್ರವಾಗಿದೆ.

**ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2025:–**

ರಜೆ ರಹಿತ ಸಮರ್ಪಣೆ ಪ್ರಸ್ತುತ ದಿನಗಳಲ್ಲಿ ಸರಕಾರಿ ಅಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎಂಬುದಕ್ಕೆ ಡಿಸಿ ಸ್ವರೂಪ ಟಿ.ಕೆ ಯವರು ಜೀವಂತ ಉದಾಹರಣೆ.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2025 ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅವರು ತೋರುತ್ತಿರುವ ಸಮರ್ಪಣೆ ವಿಶೇಷ.

ಅವರು ಎಲ್ಲಾ ತಾಲ್ಲೂಕುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ಅವರು ರಜೆ ದಿನಗಳನ್ನು ಲೆಕ್ಕಿಸದೆ ಈ ಮಹತ್ವದ ಸರಕಾರಿ ಕರ್ತವ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿ ಕೊಂಡಿ–ದ್ದಾರೆ. ಇಂತಹ ಪ್ರಮುಖ ಸಮೀಕ್ಷೆಗಳ ಯಶಸ್ವಿ ಅನುಷ್ಠಾನಕ್ಕೆ ಜಿಲ್ಲಾಧಿಕಾರಿಯವರ ಈ ಬದ್ಧತೆಯು ಅತ್ಯಗತ್ಯ.

**ಉಡುಪಿಯ ಕಲೆ–ಸಂಸ್ಕೃತಿಗೆ ಅಪೂರ್ವ ಪ್ರೋತ್ಸಾಹ:–**

ಸಾರ್ವಜನಿಕರ ಪ್ರಶಂಸೆ ಉಡುಪಿ ಜಿಲ್ಲೆಯು ಅಷ್ಟ ಮಠಗಳು, ಯಕ್ಷಗಾನ, ಕರಾವಳಿ ಕಲೆಗಳು ಮತ್ತು ವಿಶೇಷ ಸಂಸ್ಕೃತಿಗೆ ಹೆಸರುವಾಸಿಯಾಗಿದೆ. ಜಿಲ್ಲಾಧಿಕಾರಿಯವರು ಕೇವಲ ಆಡಳಿತಾತ್ಮಕ ಕಾರ್ಯಗಳಿಗೆ ಸೀಮಿತರಾಗದೆ, ಜಿಲ್ಲೆಯ ಸಾಂಸ್ಕೃತಿಕ ಕಲೆಗಳಿಗೆ ಪ್ರೋತ್ಸಾಹ ನೀಡುವಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮಗಳು, ಕಲಾ ಪ್ರದರ್ಶನಗಳು ಮತ್ತು ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ, ಅವರು ಜಿಲ್ಲೆಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತಷ್ಟು ಹೆಚ್ಚಿಸಿದ್ದಾರೆ. ಸಾರ್ವಜನಿಕರು ಜಿಲ್ಲಾಧಿಕಾರಿಯವರ ಈ ಸಾಂಸ್ಕೃತಿಕ ಪ್ರಜ್ಞೆ ಮತ್ತು ಬೆಂಬಲದ ಬಗ್ಗೆ ಮುಕ್ತವಾಗಿ ಪ್ರಶಂಸೆ ವ್ಯಕ್ತಪಡಿಸುತ್ತಿದ್ದಾರೆ.

**ತೀರ್ಮಾನ:–**

ಡಿಸಿ ಸ್ವರೂಪ ಟಿ.ಕೆ ಯವರ ಕಾರ್ಯ ವೈಖರಿಯು, ಜಿಲ್ಲಾಧಿಕಾರಿ ಹುದ್ದೆಯು ಕೇವಲ ಒಂದು ಆಡಳಿತಾತ್ಮಕ ಹುದ್ದೆಯಲ್ಲ, ಬದಲಿಗೆ ಸಮುದಾಯದ ಅಭಿವೃದ್ಧಿ ಮತ್ತು ಸಂಸ್ಕೃತಿಯ ಪೋಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ಸಾಬೀತು ಪಡಿಸಿದೆ.

ಇಂತಹ ದಕ್ಷ ಅಧಿಕಾರಿಗಳ ನಾಯಕತ್ವದಲ್ಲಿ, ಉಡುಪಿ ಜಿಲ್ಲೆಯು ಆಡಳಿತಾತ್ಮಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ರಾಷ್ಟ್ರಕ್ಕೆ ಮಾದರಿಯಾಗುವತ್ತ ಮುನ್ನುಗ್ಗುತ್ತಿದೆ.

**ವರದಿ:ಆರತಿ.ಗಿಳಿಯಾರು.ಉಡುಪಿ**

# ನದಿ ಉಳಿವಿಗೆಗಾಗಿ ಪಕ್ಷಾತೀತ ಬೆಂಬಲ–ಮಾಜಿ ಶಾಸಕ ರಾಜಾ.ವೆಂಕಟಪ್ಪ ನಾಯಕ ಘೋಷಣೆ





**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಪಟ್ಟಣದ ನೀಲಕಂಠೇಶ್ವರ ಕಲ್ಯಾಣ ಮಂಟಪದಲ್ಲಿ ರಾಷ್ಟ್ರೀಯ ಸ್ವಾಭಿಯಾನ್ ಆಂದೋಲನ, ಪರ್ಯಾವರಣ ಟ್ರಸ್ಟ್ ಶಿವಮೊಗ್ಗ ಮತ್ತು ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ರಾಯಚೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಕಿಷ್ಕಿಂಧೆಯಿಂದ ಮಂತ್ರಾಲಯದವರೆಗೆ ನಡೆಯಲಿರುವ ಪಾದಯಾತ್ರೆಯ ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ರಾಷ್ಟ್ರೀಯ ಸ್ವಾಭಿಯಾನ್ ಆಂದೋಲನ ರಾಷ್ಟ್ರೀಯ ಅಧ್ಯಕ್ಷರು ಇತ್ತೀಚೆಗೆ ಈ ಭಾಗದಲ್ಲಿ ಅತಿಯಾದ ಮಳೆಯ ಪರಿಣಾಮವಾಗಿ ಬೆಳೆ ಹಾನಿಯಾಗಿರುವುದನ್ನು ಉಲ್ಲೇಖಿಸಿ, ವಿಶ್ವ ಆರೋಗ್ಯ ಸಂಸ್ಥೆ (ಥಿಊಔ) ವರದಿ ಪ್ರಕಾರ 2040ರೊಳಗೆ ತುಂಗಭದ್ರಾ ನದಿ ಸಂಪೂರ್ಣ ಕಲುಷಿತವಾಗುವ ಸಾಧ್ಯತೆಯಿದೆ ಎಂದು ತಿಳಿಸಿದರು.

ಅವರು ತುಂಗಭದ್ರಾ ನದಿಯ ಮೂವರು ಭಾಗಗಳಲ್ಲಿ ಪ್ರತ್ಯೇಕ ತೊಂದರೆಗಳಿದ್ದು, ಶೃಂಗೇರಿಯಿಂದ ಹರಿಹರ, ಪರಿಹರದಿಂದತುಂಗಭದ್ರಾ,ಮತ್ತುತುಂಗಭದ್ರಾದಿಂದ ರಾಯಚೂರು ವರೆವಿಗೂ ಬೇರೆ ಬೇರೆ ಸವಾಲುಗಳನ್ನು ಎದುರಿಸುತ್ತಿರುವುದಾಗಿ ಹೇಳಿದರು.

ಮರಗಳು 30 ಸಾವಿರ ಲೀಟರ್ ನೀರನ್ನು ಹಿಡಿದು ನಂತರ ನದಿಗೆ ಬಿಡುವ ಕೆಲಸ ಮಾಡುತ್ತವೆ, ಆದರೆ ಆ ಪ್ರಕ್ರಿಯೆಗೆ ಮರಗಳ ಕಡಿತದಿಂದ ಅಡ್ಡಿ ಉಂಟಾಗಿದೆ ಎಂದೂ, ಹೊಲಗಳಿಗೆ ರಾಸಾಯನಿಕ ಬಳಸುವುದರಿಂದ ನದಿ ನೀರು ಕಲುಷಿತಗೊಂಡು ಜನರಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿರುವುದಾಗಿ ಹೇಳಿದರು.

ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಗಂಗಾ ನದಿ ಕಲುಷಿತವಾದ ಪರಿಣಾಮ 2.40 ಲಕ್ಷ ಜನರಿಗೆ ಕ್ಯಾನ್ಸರ್ ತಗುಲಿದೆ ಎಂಬುದನ್ನು ಉಲ್ಲೇಖಿಸಿದರು.

ಸಭೆಯಲ್ಲಿ ಮಾತನಾಡಿದ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ, ನದಿಯನ್ನು ಉಳಿಸುವ ಹೋರಾಟಕ್ಕೆ ಪಕ್ಷಾತೀತವಾಗಿ ಮತ್ತು ಜಾತ್ಯತೀತವಾಗಿ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು. ಮುಂದಿನ ಪೀಳಿಗೆಯ ಭವಿಷ್ಯದ ದೃಷ್ಟಿಯಿಂದ ನಮ್ಮ ನದಿಯನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದರು.

ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ್ ಪಾದಯಾತ್ರೆಯ ಆರಂಭದಿಂದ ಅಂತ್ಯವರೆಗೂ ನೇರವಾಗಿ ಭಾಗವಹಿಸುವುದಾಗಿ ಘೋಷಿಸಿದರು.

ಇದೇ ಸಂದರ್ಭದಲ್ಲಿ ಮಹಾದೇವ, ಚಲನಚಿತ್ರ ನಟ ವಿಷ್ಣುತೀರ್ಥ ಜೋಷಿ, ರಾಷ್ಟ್ರೀಯ ಸ್ವಾಭಿಯಾನ್ ಆಂದೋಲನ ಜಿಲ್ಲಾ ಸಂಚಾಲಕ ಎನ್. ಉದಯಕುಮಾರ ಸಾಹುಕಾರ ಸಿರವಾರ ಸೇರಿದಂತೆ ಸ್ಥಳೀಯ ರಾಜಕೀಯ ಮುಖಂಡರು ಮತ್ತು ಹೋರಾಟಗಾರರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಈ ಸಭೆಯಲ್ಲಿ ಎಲ್ಲರೂ ನದೀ ಸಂರಕ್ಷಣೆಗಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವ ಅಗತ್ಯವನ್ನು ಒತ್ತಿ ಹೇಳಿದರು ಮತ್ತು ಮುಂದಿನ ಪೀಳಿಗೆಯ ಜನರಿಗೆ ಜೀವನಾಧಾರವಾದ ತುಂಗಭದ್ರೆಯನ್ನು ಉಳಿಸಿಕೊಳ್ಳಲು ಸಂಕಲ್ಪ ವ್ಯಕ್ತಪಡಿಸಲಾಯಿತು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

# ಜೀವನದಲ್ಲಿ ಆತ್ಮವಿಶ್ವಾಸ, ನಂಬಿಕೆ ಮುಖ್ಯ





**ರಬಕವಿ–ಬನಹಟ್ಟಿ :** ಜೀವನದಲ್ಲಿ ಯಶಸ್ವಿಯಾಗಬೇಕಾದರೆ ನಮ್ಮಲ್ಲಿ ಆತ್ಮ ವಿಶ್ವಾಸ ಮತ್ತು ನಂಬಿಕೆ ಮುಖ್ಯ. ಜೀವನದಲ್ಲಿ ನಿರ್ಧಿಷ್ಟವಾದ ಗುರಿಯನ್ನು ಹೊಂದಿರಬೇಕು. ಗುರಿ ಸಾಧನೆಗೆ ಸತತ ಪ್ರಯತ್ನ ಕೂಡಾ ಮುಖ್ಯವಾಗಿದೆ ಎಂದು ಹುಬ್ಬಳ್ಳಿಯ ಭಾರತೀಯ ಸ್ಟೇಟ್ ಬ್ಯಾಂಕಿನ ವಿಭಾಗೀಯ ಕಾರ್ಯಾಲಯದ ಸಹಾಯಕ ವ್ಯವಸ್ಥಾಪಕಿ ರಶ್ಮಿ ಹೊಸಮನಿ ತಿಳಿಸಿದರು.

ಅವರು ಶನಿವಾರ ಇಲ್ಲಿನ ಎಸ್ ಟಿ ಸಿ ಬಿಬಿಎ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ವಿದ್ಯಾರ್ಥಿಗಳ ಯಶಸ್ಸಿನ ಹಿಂದಿರುವ ಶಕ್ತಿ ನಮ್ಮ ಗುರುಗಳು.

ಪ್ರತಿಯೊಬ್ಬರು ಗುರುಗಳ ಮಾರ್ಗದರ್ಶನದಲ್ಲಿ ನಡೆದರೆ ಜೀವನದಲ್ಲಿ ನಾವು ಯಶಸ್ವಿಯಾಗುತ್ತೇವೆ. ಕಲಿತ ಶಿಕ್ಷಣ ಸಂಸ್ಥೆ, ಹೆತ್ತ ತಂದೆ ತಾಯಿ ಮತ್ತು ಗುರುಗಳನ್ನು ನಾವು ಗೌರವಿಸಬೇಕು ಎಂದು ರಶ್ಮಿ ಹೊಸಮನಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಂಘದ ಆಡಳಿತ ಮಂಡಳಿಯ ನಿರ್ದೇಶಕ ಭೀಮಶಿ ಮಗದುಮ್ ಮಾತನಾಡಿ, ವಿದ್ಯಾರ್ಥಿಗಳ ಪ್ರಗತಿಗಾಗಿ ಸಂಘವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದುಕೊಂಡು ಇಂದು ಉನ್ನತ ಪದವಿಯನ್ನು ಪಡೆದುಕೊಂಡು ಅದೇ ಕಾಲೇಜಿಗೆ ಅತಿಥಿಗಳಾಗಿ ಬರುವುದು ದೊಡ್ಡ ಗೌರವ ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಂಘದ ಪಂಡಿತ ಹನಗಂಡಿ, ಬಿಬಿಎ ಸಂಯೋಜಕ ಎಸ್. ಬಿ. ಉಕ್ಕಲಿ, ಮಂಜುನಾಥ ಬೆನ್ನೂರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶ್ರೀಶೈಲ ಯಾದವಾಡ, ಮಹಾದೇವಿ ಕೊಳಕಿ, ಜಿ. ಎಚ್. ಕಾಬ್ರಾ, ಪ್ರಕಾಶ ಕೆಂಗನಾಳ, ಮನೋಹರ ಶಿರಹಟ್ಟಿ, ಕಾವೇರಿ ಜಗದಾಳ, ಲಕ್ಷ್ಮಿ ಖವಾಸಿ, ಶಿರೀಶ ಹಳೆಮನಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಸಮೀಕ್ಷೆ ಕಾರ್ಯಕ್ಕೆ ಎರಡು ದಿನ ರಜೆ ನೀಡಲು ಆಗ್ರಹ

**ರಬಕವಿ–ಬನಹಟ್ಟಿ :** ಸಾಮಾಜಿ–ಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯ ನಡೆಯುತ್ತಿದ್ದು, ಬಹಳಷ್ಟು ಸಮೀಕ್ಷೆದಾರರು ತಮ್ಮ ಮೂಲ ಸ್ಥಾನವನ್ನು ಬಿಟ್ಟು ಬೇರೆ ಕಡೆಗೆ ಸಮೀಕ್ಷೆ ಕಾರ್ಯವನ್ನು ಮಾಡುತ್ತಿದ್ದಾರೆ.

ಇದರಿಂದ ದಸರಾ ಹಬ್ಬಕ್ಕೆ ಸ್ವಂತ ಊರುಗಳಿಗೆ ತೆರಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅಕ್ಟೋಬರ 1 ಮತ್ತು 2 ರಂದು ಎರಡು ದಿನಗಳ ಕಾಲ ಸಮೀಕ್ಷೆ ಕೆಲಸಕ್ಕೆ ರಜೆ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಕಾರ್ಯದರ್ಶಿ ಬಸವರಾಜ ಹನಗಂಡಿ ಶಾಸಕ ಸಿದ್ದು ಸವದಿಯವರಿಗೆ ಮನವಿ ಸಲ್ಲಿಸಿದರು.

ಅವರು ಶನಿವಾರ ನಗರಸಭೆಯ ಸಭಾ ಭವನದಲ್ಲಿ ನಡೆದ



ಕಾರ್ಯಕ್ರಮದಲ್ಲಿ ಶಾಸಕ ಸಿದ್ದು ಸವದಿಯವರಿಗೆ ಮನವಿ ಸಲ್ಲಿಸಿ ಮಾತನಾಡಿ, ಸಮೀಕ್ಷೆ ನಡೆಸುತ್ತಿರುವವರು ತಮ್ಮ ಕುಟುಂಬದ ಸದಸ್ಯರ ಜೊತೆಗೂಡಿ ಹಬ್ಬ ಆಚ–ರಿಸಲು ಅನುಕೂಲವಾಗುವುದು. ಕಳೆದೆರಡು ದಿನಗಳಿಂದ ಅತೀವ ಮಳೆಯಾಗುತ್ತಿದ್ದು ಮತ್ತು ಸಮೀಕ್ಷೆ ಸಿಬ್ಬಂದಿ ಹಲವಾರು ತಾಂತ್ರಿಕ ಸಮಸ್ಯೆಗಳನ್ನು ಎದು–ರಿಸುತ್ತಿದ್ದಾರೆ. ಇವುಗಳನ್ನು ಕೂಡಾ ತಕ್ಷಣವೇ ಪರಿಹ–ರಿಸಬೇಕು. ಇದರಿಂದಾಗಿ ಸಮೀಕ್ಷೆ ಕಾರ್ಯ ವಿಳಂಬವಾಗುತ್ತಿದೆ. ಆದ್ದರಿಂದ ಸಮೀಕ್ಷಾ ಕಾರ್ಯದ ಅವಧಿಯನ್ನು ಸರ್ಕಾರ ಹೆಚ್ಚಿಸಬೇಕು ಬಸವರಾಜ ಹನಗಂಡಿ ಮನವಿ ಮಾಡಿಕೊಂಡರು.

ಮಲ್ಲಿಕಾರ್ಜುನ ಬಳ್ಳಾರಿ, ಪ್ರಶಾಂತ ಹೊಸಮನಿ, ಡಿ. ಬಿ. ಜಾಯಗೊಂಡ, ಮಲ್ಲಿಕಾರ್ಜುನ ಗಡೆನ್ನವರ ಪಾಲ್ಗೊಂಡಿದ್ದರು.

# ಬನಹಟ್ಟಿಯಲ್ಲಿ ದಸರೆಗೆ ರಂಗು ತಂದಿರುವ ಬೊಂಬೆಗಳ ಪ್ರದರ್ಶನ





**– ಕಿರಣ ಶ್ರೀಶೈಲ ಆಳಗಿ.**

**ಬನಹಟ್ಟಿ :** ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ತಾಲೂಕಿನ ಬನಹಟ್ಟಿಯ ಮೋಹನ ಮಹಾದೇವಪ್ಪ ಪತ್ತಾರ ಕುಟುಂಬದವರು ಸುಮಾರು ಐವತ್ತು ವರ್ಷಗಳಿಂದ ದಸರಾ ಹಬ್ಬದಲ್ಲಿ ಬೊಂಬೆ ಪ್ರದರ್ಶನ ಮಾಡುತ್ತಾ ಬಂದಿದ್ದಾರೆ. ಇದೀಗ ಅವರ ಮನೆಯಲ್ಲಿ ದಸರೆಯ ನಿಮಿತ್ಯ ಗೊಂಬೆಗಳ ಪ್ರದರ್ಶನ ಈ ಭಾಗದಲ್ಲಿ ದಸರೆಯ ವೈಭವವನ್ನು ಸಾರುತ್ತಿದೆ.

ದಸರಾ ಹಬ್ಬದ ನಿಮಿತ್ಯವಾಗಿ ಬನಹಟ್ಟಿಯ ಪತ್ತಾರ ಕುಟುಂಬದವರು ತಮ್ಮ ಮನೆಯಲ್ಲಿ ಸುಂದರವಾಗಿ ಗೊಂಬೆಗಳ ಪ್ರದರ್ಶನವನ್ನು ಹಮ್ಮಿಕೊಂಡಿದ್ದಾರೆ. ವೈವಿಧ್ಯಮಯವಾದ ಗೊಂಬೆಗಳು, ಮೈಸೂರ ದಸರಾ ಮೆರವಣಿಗೆಯ ಆನೆಗಳು ಸೇರಿದಂತೆ ಹಲವಾರು ಗೊಂಬೆಗಳನ್ನು ಇಟ್ಟಿದ್ದು,

ಇವುಗಳಿಗೆ ಲೈಟಿಂಗ್ ಮಾಡಿ ಮತ್ತಷ್ಟು ಆಕರ್ಷಕವಾಗಿ ಕಾಣುವಂತೆ ಮಾಡಿದ್ದಾರೆ. ಸಧ್ಯ ಬೊಂಬೆಗಳ ಸಂಖ್ಯೆ ಇನ್ನೂರಕ್ಕೂ ಹೆಚ್ಚು ಇದ್ದು, ಪ್ರತಿ ವರ್ಷ ನಾಲ್ಕರಿಂದ ಐದು ಬೊಂಬೆಗಳನ್ನು ಹೆಚ್ಚೆಚ್ಚು ಮಾಡುತ್ತಾ ಬರುತ್ತಿದ್ದಾರೆ.

ಮನೆಯ ಸದಸ್ಯರಾದ ವಂದನಾ, ಗೀತಾ, ಕಲಾ, ಶ್ರುತಿ, ಸ್ನೇಹಾ, ಶಕುಂತಲಾ, ಅನ್ನಪೂರ್ಣಾ ಹಾಗೂ ಮಕ್ಕಳು ಈ ಗೊಂಬೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ಇಡಲು ಸಾಕಷ್ಟು ಪರಿಶ್ರಮ ವಹಿಸಿರುತ್ತಾರೆ.

ಈಬಾರಿಯಪ್ರದರ್ಶನದಲ್ಲಿನವದುರ್ಗೆಯರು, ವಿಷ್ಣುವಿನ ಅವತಾರ, ಕೃಷ್ಣನ ದಶಾವತಾರ,

> ಒಟ್ಟಾರೆ ಇಂತಹ ಪ್ರದರ್ಶನಗಳು ನಮ್ಮ ಪರಂಪರೆ, ಸಂಪ್ರದಾಯವನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ನಮ್ಮ ಮನೆಯಲ್ಲಿ ಸುಮಾರು ಐವತ್ತು ವರ್ಷಗಳಿಂದ ದಸರಾ ಸಂದರ್ಭದಲ್ಲಿ ಬೊಂಬೆಗಳನ್ನು ಕೂಡ್ರಿಸುವ ಸಂಪ್ರದಾಯವಿದ್ದು, ಕಳೆದ ಇಪ್ಪತ್ತು ವರ್ಷದಿಂದ ಹೊಸ ಮನೆಯಲ್ಲಿ ಜಾಗೆ ಹೆಚ್ಚಳವಾಗಿದ್ದ–ರಿಂದ ಅದನ್ನು ಅಚ್ಚು ಕಟ್ಟಾಗಿ ಏಳು ಹಂತದಲ್ಲಿ ಜೋಡಿಸಿ ಪ್ರದರ್ಶನ ಮಾಡುತ್ತೇವೆ. ನಮ್ಮ ಪರಂಪರೆ ಸಂಸ್ಕೃತಿ ಉಳಿದು ಬೆಳೆಯಲಿ ಎಂಬುದೆ ನಮ್ಮ ಆಶಯ. ಪ್ರದರ್ಶನ ನೋಡಲು ನಮ್ಮ ಆಪ್ತರು, ಸಂಬಂಧಿಕರು ಬಂದು ನೋಡಿ ಖುಷಿ ಪಡುತ್ತಾರೆ.
>
> । ಕಲಾ ರವೀಂದ್ರ ಪತ್ತಾರ, ಬನಹಟ್ಟಿ.

ನಾಟ್ಯ ಗಣಪತಿ, ಮದುವೆ ಮಂಟಪ, ಕೃಷ್ಣನ ರಾಸ ಲೀಲೆಗಳು,

ಚೆನ್ನಪಟ್ಟಣದ ಬೊಂಬೆಗಳು, ಪಟ್ಟದ ಬೊಂಬೆಗಳು, ಮೈಸೂರು ಅರಮನೆ, ಜಂಬು ಸವಾರಿ, ತೋಪುಗಳು, ಕಾಮಧೇನು ಆಕಳು,

> ನಮ್ಮ ಪರಂಪರೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇಂತಹ ಸಂಪ್ರದಾಯಗಳು ಅವಶ್ಯವಾಗಿವೆ. ದಸರೆಯ ವೈಭವವನ್ನು ಇಲ್ಲಿ ಪ್ರತಿಷ್ಠಾಪಿಸಿರುವುದು ಸಂತಸದ ವಿಷಯ. ಪುರಾಣ, ರಾಮಾಯಣ, ಮಹಾಭಾರತ ಎಲ್ಲವನ್ನು ಒಳಗೊಂಡಿದೆ. ಇದು ನೋಡುಗರನ್ನು ಆಕರ್ಷಿಸುತ್ತಿದೆ. ನಮ್ಮ ಸಂಸ್ಕೃತಿ ಉಳಿಸಿ ಬೆಳೆಸುವ ಪ್ರಯತ್ನ ಮಾಡುತ್ತಿರುವ ಪತ್ತಾರ ಕುಟುಂಬದ ಕಾರ್ಯ ನಿಜಕ್ಕೂ ಶ್ಲಾಘನೀಯ.
>
> । ಜಯವಂತ ಕಾಡದೇವರ
> ಹಿರಿಯ ಸಾಹಿತಿಗಳು, ರಬಕವಿ–ಬನಹಟ್ಟಿ

ರಾಜಸ್ಥಾನದ ಬೊಂಬೆಗಳು ಸೇರಿದಂತೆ ಇನ್ನೂ ಅನೇಕ ಪ್ರಕಾರದ ಬೊಂಬೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿರುವುದು ನೋಡುಗರನ್ನು ಆಕರ್ಷಿಸುತ್ತಿದೆ.

ಅಲ್ಲದೇ ಈ ವರ್ಷ ಹೊಸದಾಗಿ ಮದುರೈ ಮೀನಾಕ್ಷಿಯ ಕಲ್ಯಾಣ ಮಹೋತ್ಸವದ ಬೊಂಬೆ ಹಾಗೂ ಕೇದಾರನಾಥನ ಪ್ರತಿಕೃತಿ ನೋಡುಗರ ಕಣ್ಮನ ಸೆಳೆಯುತ್ತಿವೆ.

# ಬಿಜೆಪಿಯಿಂದ ಭಾರತ ದರ್ಶನ: ಆರೋಗ್ಯ ಅರಿವು ಉಪನ್ಯಾಸ



**ಬಾಗಲಕೋಟೆ :** ಭಾರತ ತಲೆ ತಗ್ಗಿಸುವ ಸ್ಥಿತಿ ಇಲ್ಲ, ಜಗತ್ತೆ ಭಾರತಕ್ಕೆ ತಲೆ ಬಾಗುತ್ತಿದ್ದು, ಭಾರತ ಜಗತ್ತಿನ ಜಗಜ್ಜನಿಯಾಗುವತ್ತ ಸಾಗುತ್ತಿದೆ ಎಂದು ಉಡುಪಿಯ ಪ್ರಕಾಶ ಮಲ್ಪೆ ಹೇಳಿದರು.

ಅವರು ನಗರದ ಬಿ.ವಿ.ವಿ.ಸಂಘದ ನೂತನ ಸಭಾ ಭವನದಲ್ಲಿ ಶುಕ್ರವಾರ ಭಾರತೀಯ ಜನತಾ ಪಾರ್ಟಿ ಬಾಗಲಕೊಟೆ
ಮತಕ್ಷೇತ್ರದಿಂದ ಹಮ್ಮಿಕೊಂಡ ಪ್ರಧಾನಿ ನರೇಂದ್ರ ಮೋದಿಯವರ 75ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಭಾರತ
ದರ್ಶನ ಹಾಗೂ ಆರೋಗ್ಯ ಅರಿವು ಕಾರ್ಯಕ್ರಮದಲ್ಲಿ ಮುಖ್ಯ ಬೌದ್ಧಿಕ ಪ್ರಮುಖರಾಗಿ ಭಾರತ ದರ್ಶನದ ಬಗ್ಗೆ ಮಾತನಾಡಿದ ಅವರು ಭಾರತೀಯರಾದ ನಾವು ಶಿಕ್ಷಣವನ್ನು ಪಡೆದ ನಂತರ ಮೊದಲೆ ಹೆಜ್ಜೆ ತಂದೆ ತಾಯಿಯನ್ನು ಖುಷಿ ಪಡಿಸುವುದೆ ಶಿಕ್ಷಣದ ಮೊದಲ ಹೆಜ್ಜೆಯಾಗಿದೆ. ರಾಮಾಯಣ ಕಾಲದಲ್ಲಿ ಇಡಿ ಜಗತ್ತಿನ ನದಿ ಪರ್ವತಗಳು ಸಂಸ್ಕೃತ ಹೆಸ–ರಿನಿಂದ ಕರೆಯಲ್ಪಡುತ್ತಿದ್ದವು, ಸಂಸ್ಕೃತ ಭಾಷೆಯಾಗಿ ಭಾರತದಲ್ಲಿತ್ತು, ಅಂದರೆ ರಾಮಾಯಣ–ಕಾಲದಿಂದಲೂ ಭಾರತ ಜಗತ್ತನ್ನು ಸಾಂಸ್ಕೃತಿಕವಾಗಿ ಆಳತಾ ಇತ್ತು ಅನ್ನೊದು ಕಂಡುಬರುತ್ತದೆ, ಎಲ್ಲ ವಿದೇಶಗಳಿಲ್ಲರದ ನೈಸರ್ಗಿಕ ಪ್ರಾಕೃತಿಕ ಸಂಪತ್ತು ಭಾರತದಲ್ಲಿದೆ, ಭಾರತ ಜಗತ್ತಿಗೆ ಸೊನ್ನೆಯನ್ನು ನೀಡಿದೆ ಸೋನ್ನೆಯ ಇನ್ನೊಂದು ಹೆಸರೆ ಪೂಜ್ಯ ಎಂದು, ಸೋನ್ನೆಯಿಲ್ಲದೆ ಹೊದರೆ ಗಣಿತಶಾಸ್ತ್ರಕ್ಕೆ ಅರ್ಥವೆ ಇರೊಲ್ಲ ಅನ್ನೊ ಸತ್ಯ ಎಲ್ಲರಿಗೆ ಗೊತ್ತಿದೆ, ಭಾರತದ ಮಹಾಭಾರತದಲ್ಲಿ ಜಗತ್ತಿನ ಎಲ್ಲ ಸಂಗತಿಗಳು ಇವೆ, ಇಂದು ಭಾರತ ಮತ್ತೆ ವಿಶ್ವಗುರುವಾಗುವಲ್ಲಿ ವಿದ್ಯಾರ್ಥಿಗಳು ದೇಶದೊಂದಿಗೆ ಅನುಸಂಧಾನ ಮಾಡಿಕೊಂಡು ಅಭಿವೃದ್ದಿಗೆ ಶ್ರಮಿಸಬೇಕು, ಮತ್ತೆ ಜಗತ್ತಿನ ಜಗಜ್ಜನನಿಯಾಗಲಿ ಎಂದರು.

ಅರಿಸಿಕೇರಿ ಸ್ವದೇಶ ದಿಶಾದ ಮ್ಯಾನೇಜಿಂಗ್ ಡೈರೆಕ್ಟರ ಕೆ.ಪಿ ಗುರಲಿಂಗಯ್ಯ ಅವರು ಆರೋಗ್ಯ ಅರಿವು ಕು–ರಿತು ಮಾತನಾಡುತ್ತಾ ಆರೋಗ್ಯವಂತ ವ್ಯಕ್ತಿ ಮಾತ್ರ ಏನಾದರೂ ಸಾಧಿಸಬಲ್ಲ, ಆರೋಗ್ಯವಂತ ಸಮಾಜ ನಮ್ಮದಾಗಿ–ತ್ತು, ನಮ್ಮ ಪಾರಂಪರಿಕ ಆರೋಗ್ಯ ಪದ್ದತಿ ಹಾಗೂ ಮನೆ ಅಡುಗೆಯಲ್ಲಿನ ಆರೋಗ್ಯದ ಅರಿವು ಇಂದಿನ ಪಿಳಿಗೆಗೆ ಅಗತ್ಯವಾಗಿದೆ, ಮನೆಯಲ್ಲಿ ಅಡುಗೆಗೆ ಬಳಸುವ ಎಣ್ಣೆಯ ಶುದ್ದತೆಯನ್ನು ಪರೀಕ್ಷಿಸಬೇಕು, ಭಾರತದ ಅಹಾರ ಪದ್ದತಿ ಜಗತ್ತಿನಲ್ಲಿ ಎಲ್ಲೂ ಇರದ ಶ್ರೇಷ್ಠ ಅಹಾರ ಪದ್ದತಿಯಾಗಿದೆ, ನಮ್ಮ ಅಡುಗೆ ಮನೆಯು ಬರಿ ಅಹಾರ ಉತ್ಪಾಧನೆ ಮಾಡುವುದಲ್ಲದೆ ನಮ್ಮ ವಂಶವನ್ನು ಉದ್ದಾರ ಮಾಡುವುದುದಾಗಿದೆ, ಭಾರತದ ಯುವ ಜನತೆಯನ್ನು ಸೋಸಿಯಲ್ ಮಿಡಿಯಾ ಮೂಲಕ ಶಕ್ತಿ ಹಿನರನ್ನಾಗಿ ಮಾಡುವ ಜಾಲದ ಬಗ್ಗೆ ಯುವ ಪಿಳಿಗೆ ಜಾಗೃತಗೊಳ್ಳಬೇಕು, ಭಾರತದ ಪ್ರತಿ ಯುವಕ ಯುವತಿಯರಲ್ಲಿ ಅಧ್ಭುತ ಚೈತನ್ನ ಅಡಗಿದೆ ಅದು ದೇಶಕ್ಕೆ ಉಪಯೋಗವಾಗಲಿ ಎಂದರು.

ಮುಖ್ಯ ಅತಿಥಿಗಳಾಗಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಆಗಮಿಸಿದ್ದರು, ಮಾಜಿ ಶಾಸಕರಾದ ಡಾ.ವೀರಣ್ಣ ಚರಂತಿಮಠ ಅವರು ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಮೇಲೆ ಬಿಜೆಪ ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣುರ,. ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ ಇದ್ದರು. ಕಾರ್ಯಕ್ರಮದಲ್ಲಿ ಜಿ.ಎನ್.ಪಾಟೀಲ, ಡಾ.ಎಂ.ಎಸ್.ದಡ್ಡೆನ್ನವರ,ಮಹೇಶ ಅಂಗಡಿ, ಪ್ರಭುಸ್ವಾಮಿ ಸರಗಣಾಚಾರಿ, ಸಂಗಣ್ಣ ಕಲಾದಗಿ, ಶ್ರೀಧರ ನಾಗರಬೆಟ್ಟ, ಉಮೇಶ ಹಂಚಿನಾಳ, ಕಲ್ಲಪ್ಪ ಭಗವತಿ, ಮಲ್ಲೇಶ ವಿಜಾಪುರ, ವೈಧ್ಯಕೀಯ ಪ್ರಕೋಷ್ಟದ ಸಂಚಾಲಕ ರವಿ ಕೋಟೆನ್ನವರ, ವಿಜಯ ಚೌದರಿ ಇದ್ದರು.

ಇದೇ ಸಂದರ್ಭದಲ್ಲಿ ಬಿಜೆಪಿ ವೈದ್ಯಕೀಯ ಪ್ರಕೋಷ್ಟ ಹಾಗೂ ಬಿ.ವಿ.ವಿ.ಎಸ್. ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಯವರಿಂದ ಕಾರ್ಯಕರ್ತರಿಗೆ ರಕ್ತ ಸಕ್ಕರೆ ಹಾಗೂ ರಕ್ತದೊತ್ತಡ ತಪಾಸಣೇ ಮಾಡಲಾಯಿತು.

# ಮುಧೋಳ ತಾಲೂಕು ಪ್ರಥಮ ಮಹಿಳಾ ಕನ್ನಡ ಜಾನಪದ ಸಮ್ಮೇಳನದ ಸರ್ವಾಧ್ಯಕ್ಷರಾಗಿ ನಾಡೋಜ ಯಲ್ಲವ್ವ ರೊಡ್ಡಪ್ಪನವರ ಆಯ್ಕೆ

**ಲೋಕಾಪುರ :** ಪಟ್ಟಣದಲ್ಲಿ ಅಕ್ಟೋಬರ್ 5 ರಂದು ಕನ್ನಡ ಜಾನಪದ ಪರಿಷತ್ ವತಿಯಿಂದ ಜರುಗಲಿರುವ ಮುಧೋಳ ತಾಲೂಕು ಪ್ರಥಮ ಮಹಿಳಾ ಕನ್ನಡ ಜಾನಪದ ಸಮ್ಮೇಳನದ ಸರ್ವಾಧ್ಯಕ್ಷರಾಗಿ ನಾಡೋಜ ಪ್ರಶಸ್ತಿ ಪುರಸ್ಕೃತ ಕಲಾವಿದೆ ಯಲ್ಲವ್ವರೊಡ್ಡಪ್ಪನವರಆಯ್ಕೆಯಾಗಿದ್ದಾರೆ. ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ನೇತೃತ್ವದಲ್ಲಿ ಕನ್ನಡ ಜಾನಪದ ಪರಿಷತ್ ತಾಲೂಕು ಮಹಿಳಾ ಘಟಕ ಮತ್ತು ಲೋಕಾಪುರ ವಲಯ ಮಹಿಳಾ ಘಟಕದ ಪದಾಧಿಕಾರಿಗಳು ಠಾಣಿಕೇರಿ ಗ್ರಾಮದ ನಾಡೋಜ ಪ್ರಶಸ್ತಿ ಪುರಸ್ಕೃತ ಹಿರಿಯ ಕಲಾವಿದೆ ಯಲ್ಲವ್ವ ರೊಡ್ಡಪ್ಪನವರ ಅವರ ಸ್ವಗೃಹಕ್ಕೆ ತೆರಳಿ ಅವರನ್ನು ಸನ್ಮಾನಿಸಿ ಅಧಿಕೃತ ಆಹ್ವಾನ ನೀಡಿದರು.



ಕಜಾಪ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಮಾತನಾಡಿ, ಆಧುನಿಕ ಭರಾಟೆಯಲ್ಲಿ ಮಾಯವಾಗುತ್ತಿರುವ ಜಾನಪದ ಕಲೆಗಳನ್ನು ಉಳಿಸಲು, ಕಲಾವಿದರನ್ನು ಬೆಳೆಸಲು, ಗೌರವಿಸಲು ಜಾನಪದ ಸಮ್ಮೇಳನಗಳನ್ನು ಆಯೋಜನೆ ಮಾಡಲಾಗುತ್ತದೆ. ಜಾನಪದ ಸಾಹಿತ್ಯದಲ್ಲಿ ನಾಡಿನ ಸಂಸ್ಕೃತಿ, ಸಂಪ್ರದಾಯ ಅಡಗಿದ್ದು, ನಮ್ಮ ನೆಲಮೂಲ ಸಂಸ್ಕೃತಿಯನ್ನು ಇಂದಿನ ಯುವ ಸಮೂಹಕ್ಕೆ ಪರಿಚಯಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಜಾನಪದ ಕಲೆಯನ್ನು ಉಳಿಸಿ ಬೆಳೆಸುವುದರ ಜೊತೆಗೆ ಕಲಾವಿದರಿಗೆ ಸೂಕ್ತ ವೇದಿಕೆ ಕಲ್ಪಿಸಿ ಗೌರವಿಸುವ ಕೆಲಸಕ್ಕೆ ನಮ್ಮ ಪರಿಷತ್ ಮಹಿಳಾ ಪದಾಧಿಕಾರಿಗಳು ಮುಂದಾಗಿದ್ದು ಅಭಿಮಾನದ ಸಂಗತಿ. ಸಮ್ಮೇಳನದ ಯಶಸ್ವಿಗೆ ಲೋಕಾಪುರದ ಜನತೆ, ಗಣ್ಯರು, ತನು ಮನ ಧನದಿಂದ ಕೈಜೋಡಿಸಿದ್ದು ಶ್ಲಾಘನೀಯ ಕಾರ್ಯವಾಗಿದೆ ಎಂದರು.

ಕರ್ನಾಟಕಸಹಕಾರಕುರಿಮಹಾಮಂಡಳದ ಉಪಾಧ್ಯಕ್ಷ ಕಾಶೀನಾಥ ಹುಡೇದ ಮಾತನಾಡಿ,
ಸಿನಿಮಾ ಹಾಗೂ ಟಿವಿ ಮಾಧ್ಯಮಗಳಿಂದ ಸಮಾಜದಲ್ಲಿ ಜಾನಪದ ಕಲೆ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದ್ದು, ಇಂಥ ಪರಿಸ್ಥಿತಿಯ ನಡುವೆ ಸಂಸ್ಕಾರ, ಸಂಬಂಧಗಳನ್ನು ಗಟ್ಟಿಗೊಳಿಸಲು ಜನಪದ ಸಾಹಿತ್ಯ ಹಾಗೂ ಕಲೆಗಳು ಅವಶ್ಯಕವಾಗಿದ್ದು, ರಂಗ ಕಲಾವಿದೆಯನ್ನು ಮುಧೋಳ ತಾಲೂಕು ಪ್ರಥಮ ಕನ್ನಡ ಜಾನಪದ ಮಹಿಳಾ ಸಮ್ಮೇಳನಕ್ಕೆ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಇನ್ನಷ್ಟು ಮೆರಗು ನೀಡುತ್ತದೆ ಎಂದು ತಿಳಿಸಿದರು.

ಸನ್ಮಾನ ಸ್ವೀಕರಿಸಿದ ಯಲ್ಲವ್ವ ರೊಡ್ಡಪ್ಪನವರ ಮಾತನಾಡಿ, ಲೋಕಾಪೂರ ಪಟ್ಟಣದಲ್ಲಿ ಮುಧೋಳ ತಾಲೂಕು ಪ್ರಥ–ಮ ಮಹಿಳಾ ಕನ್ನಡ ಜಾನಪದ ಸಮ್ಮೇಳನ ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿ. ಜಾನಪದ ಸಾಹಿತ್ಯದ ಸುಗಂಧವನ್ನು ಪ್ರತಿ ಮನೆ ಬಾಗಿಲಿಗೆ ತಲುಪಿಸಲು ಒಳ್ಳೆಯ ವೇದಿಕೆಯಾಗಲಿದೆ. ನನ್ನನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕೆ ಅತೀವ ಸಂತೋಷವಾಗಿದೆ ಎಂದು ಹೇಳಿದರು.

ಈ ವೇಳೆ ಕಜಾಪ ಜಿಲ್ಲಾ ಕಾರ್ಯದರ್ಶಿ ಆರ್. ಬಿ. ನಬಿವಾಲೆ, ತಾಲೂಕು ಅಧ್ಯಕ್ಷೆ ಲಕ್ಷ್ಮೀ ಹಾರುಗೊಪ್ಪ, ವಲಯ ಘಟಕದ ಅಧ್ಯಕ್ಷೆ ರೇಖಾ ನರಹಟ್ಟಿ, ರಾಜೇಶ್ವರಿ ಮೋದಿ, ಶಕುಂತಲಾ ಹುಲ್ಲನ್ನವರ, ಕವಿತಾ ಮುದಕವಿ,
ಮಹಾದೇವಿ ಮುತ್ತಿನಮಠ, ಸುಧಾ ಗಸ್ತಿ, ಸವಿತಾ ಗಂಗಾವತಿ, ತುಂಗವ್ವ ಪಾಟೀಲ, ಶಾರದಾ ಲಿಂಗದಮಠ, ಗೀತಾ ಹಲಕಿ, ಸುರೇಖಾ ಹಟ್ಟಿ, ನಿವೇದಿತಾ ಕಾಂಬಳೆ, ಗಿರಿಜಾ ಅಂಗಡಿ, ಲಕ್ಕವ್ವ ನಾವಿ, ರೇಖಾ ಒಂಟಗೋಡಿ, ವಿಜಯಲಕ್ಷ್ಮಿ ಮರನೂರ, ಗೀತಾ ಜನಕರ, ಕಾವ್ಯ ಹೊಸಮನಿ, ರಶ್ಮಿ ಗುಳ್ಳನ್ನವರ, ಸುರೇಶ ಹುಗ್ಗಿ, ಶ್ರೀಕಾಂತ ನರಹಟ್ಟಿ ಮತ್ತಿತರರು ಹಾಜರಿದ್ದರು.

# ಭಗತಸಿಂಗ ಜನ್ಮ ದಿನಾಚರಣೆ



**ಬನಹಟ್ಟಿ :** ಇಲ್ಲಿಯ ಹಂಸವೇಣಿ ಪೂರ್ವ ಪ್ರಾಥಮಿಕ ಮತ್ತು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ರಾಂತಿಕಾರಿ ಹುತಾತ್ಮ, ದೇಶಭಕ್ತ ಭಗತ್ ಸಿಂಗ್ ಅವರ ಜನ್ಮದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಸಂಗಮೇಶ ಗುಟ್ಲಿ ಮಾತನಾಡಿ, ಭಾರತಾಂಬೆಗೆ ತನ್ನ ಸರ್ವಸ್ವವನ್ನೂ ಅರ್ಪಿಸಿದ ಮಹಾನ್ ದೇಶಭಕ್ತ ಕ್ರಾಂತಿ–ಕಾರಿ ಹೋರಾಟಗಾರ ಭಗತ್ ಸಿಂಗ್. ಅವರು ಅತ್ಯಂತ ಚಿಕ್ಕವಯಸ್ಸಿನಲ್ಲಿಯೇ, ಕೇವಲ ಇಪ್ಪತ್ತೂರನೇ ವಯಸ್ಸಿನಲ್ಲಿಯೇ ಬ್ರಿಟಿಷರನ್ನು ಕಂಗೆಡಿಸಿ, ಅವರ ವಿರುದ್ಧ ಉಗ್ರವಾಗಿ ಹೋರಾಡಿ ಹುತಾತ್ಮರಾದವರು.

ತನ್ನ ಇಪ್ಪತ್ಮೂರು ವರ್ಷಗಳ ಜೀವಿತಾವಧಿಯಲ್ಲಿ, ಕ್ರಾಂತಿಯ ಜ್ವಾಲೆಯನ್ನು ಶರವೇಗದಂತೆ ಪಸ–ರಿಸಿದ ಭಗತ್ ಸಿಂಗ್, ಅದೇ ವೇಗದಲ್ಲಿ ತಾಯಿ ಭಾರತಿಗೆ ತಮ್ಮ ಪ್ರಾಣವನ್ನು ಅರ್ಪಿಸಿದರು. ನಮ್ಮ ಧರ್ಮ, ಸಂಸ್ಕೃತಿ ಮತ್ತು ದೇಶಕ್ಕಾಗಿ ಅವರವರ ಕ್ಷೇತ್ರಗಳಲ್ಲಿ ಅವರ ಶಕ್ತ್ಯಾನುಸಾರ, ತಮ್ಮ ತನು ಮನ ಧನವನ್ನು ಅರ್ಪಿಸಿದ ಶ್ರೇಷ್ಠ ಹೋರಾಟಗಾರ ಎಂದು ಹೇಳಿದರು.


ಶಾಲೆಯ ಸಿಬ್ಬಂದಿಗಳಾದ ಅಬ್ದುಲ್ ಬಿಜಾಪುರ, ಥಾಮಸ್, ಸ್ವಾತಿ ಗಾಯಕವಾಡ, ತಬಸ್ತುಮ್ ಮೋಮಿನ್, ಮಹೇಶ್ವರಿ ಸಾಲ್ಗುಡೆ, ಮಧು ರಾಜನಾಳ, ದಾನೇಶ ಬೆಳ್ಳಂಕಿ, ಪ್ರಮೋದ ಲೋಣಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಕಿರಣ ಚಂ. ಮುತ್ತೂರ ನಿಧನ



**ರಬಕವಿ :** ಶ್ರೀನಿಧಿ ಸೊಸೈಟಿಯ ಜಮಖಂಡಿ ಶಾಖೆಯ ಸಿಬ್ಬಂದಿಯಾಗಿದ್ದ, ಬಣಜಿಗ ಸಮಾಜದ ಕಿರಣ ಚಂದ್ರಶೇಖರ ಮುತ್ತೂರ ತಮ್ಮ 50 ನೆಯ ವಯಸ್ಸಿನಲ್ಲಿ ಸಪ್ಟೆಂಬರ್ 28 ರಂದು ನಸುಕಿನ ಜಾವ ತೀವ್ರ ಸ್ವರೂಪದ ಹೃದಯಾಘಾತದಿಂದ ಜಮಖಂಡಿಯಲ್ಲಿ ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಓರ್ವ ಪುತ್ರ , ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

# ವಿಶ್ವಕರ್ಮ ಸಂಸ್ಕೃತಿ ಮತ್ತು ಸಾಮಾಜಿಕ ವಿವೇಕ



ವಿಶ್ವಕರ್ಮ ಎಂಬ ಪೌರಾಣಿಕ ಹೆಸರು ವೇದವಾಙ್ಮಯಗಳಲ್ಲಿ ಹೆಚ್ಚಾಗಿ ಪ್ರಯೋಗವಾಗಿದೆ. ವೇದಗಳು ವಿಶ್ವಕರ್ಮನನ್ನು 'ದೇವಶಿಲ್ಪಿ' ಎಂದು ಕರೆದಿವೆ. 'ವಿಶ್ವಂ ಕೃತ್ಸ್ನಂ ಕರ್ಮ ಕ್ರಿಯಾ ವ್ಯಾಪಾರೋ ಯಶ್ಯಸಃ ವಿಶ್ವಕರ್ಮಾ' ಎಂದು ಹೇಳಿವೆ. ವಿಶ್ವದ ಸೃಜನೆ, ರಕ್ಷಣೆ, ಕ್ರಿಯೆ ಹಾಗೂ ಆಗು ಹೋಗುಗಳು ಯಾವನಿಂದ ಆಗುತ್ತವೆಯೋ ಅವನೇ ವಿಶ್ವಕರ್ಮನು. ತನ್ನ ಸಂಕಲ್ಪ ಮಾತ್ರದಿಂದಲೇ ಸಕಲವನ್ನು ಸೃಷ್ಟಿಸಿದವನು. ಜಗತ್ತಿನ ಜನರೆಲ್ಲರ ಹಿತಕ್ಕಾಗಿ ಅಗ್ನಿಷ್ಟೋಮಾದಿ ಯಾಗಗಳನ್ನು, ಎಲ್ಲಾ ವರ್ಣಗಳ ಪ್ರಾಣಿಗಳ ಸ್ಥಿತಿ ಕಾರಣಕ್ಕಾಗಿ ಶಿಲೆ, ಲೋಹ, ಕಾಷ್ಠ, ಸ್ವರ್ಣ ಮೊದಲಾದ ಪ್ರತಿಮಾ ಪಂಚಶಿಲ್ಪಗಳನ್ನು ನಿರ್ಮಿಸಿದವನು. ವಿವಾಹಾದಿ ಯಜ್ಞಗಳಲ್ಲಿ ತೊಡಗುವವನೂ, ಗೃಹಾರಾಮಗಳನ್ನು ನಿರ್ಮಿಸುವವನೂ, ವೇದಾಧ್ಯಯನ ಪಾರಾಯಣನೂ, 64 ಕಲೆಗಳಲ್ಲಿ ಪರಿಣಿತನೂ, ವಾಸ್ತುವಿದ್ಯಾ ಕೋವಿದನೂ, ಧರ್ಮನಿಷ್ಠನೂ, ಅಸಿಕರ್ಮ, ಲಿಪಿಕರ್ಮ, ಕೃಷಿಕರ್ಮ, ಶಾಸ್ತ್ರಜೀವನ, ವಾಣಿಜ್ಯಕರ್ಮಗಳೆಂಬ ಷಟ್ಕರ್ಮಗಳಲ್ಲಿ ನಿರತನಾದವನೂ, ಕರ್ಮವನ್ನೇ ಯೋಗ ಮಾಡಿಕೊಂಡವನೂ, ಜ್ಞಾನ ಮತ್ತು ಕರ್ಮಮಾರ್ಗಗಳನ್ನು ಸಮನ್ವಯ ಮಾಡಿ ಜಗತ್ತನ್ನು ಸಮಚಿತ್ತದಿಂದ ನಡೆಸುವವನೇ ವಿಶ್ವಕರ್ಮ ಪರಮಾತ್ಮನಾಗಿದ್ದಾನೆ.

'ಯೋಗ: ಕರ್ಮಸು ಕೌಶಲಂ' ಎಂಬ ಮಾತು ಭಗವದ್ಗೀತೆಯಲ್ಲಿದೆ. ಕರ್ಮ ಕೌಶಲ್ಯವೇ ಪರಮಾತ್ಮನ ಅರಿವಿಗೆ ಮಾಡುವ ಯೋಗ. 'ವಿಶ್ವಕರ್ಮ' ಎನ್ನುವ ಪದಗುಚ್ಛವೇ ತಾನು ಕರ್ಮಿಯಾಗಿ ಜಗತ್ತನ್ನು ಜ್ಞಾನ ಮತ್ತು ಕರ್ಮ(ಕ್ರಿಯೆ) ಮಾರ್ಗದಲ್ಲಿ ನಡೆಸುವವರೇ ವಿಶ್ವಕರ್ಮರು ಎಂದು ಅರ್ಥ ಕೊಡುತ್ತದೆ. ಜ್ಞಾನ ವಿಜ್ಞಾನ ಎರಡಕ್ಕೂ ಸಾಧನವಾದ ಪಂಚಶಿಲ್ಪಗಳಿಂದ ಶಿಲ್ಪಯೋಗರೂಪಿಯೂ ವಿಜ್ಞಾನ ಮಾರ್ಗದಿಂದ ಲೋಕಾನುಗ್ರಹಕಾಂಕ್ಷಿತರಾದ ಪಂಚಶಿಲ್ಪಿಗಳೇ ವಿಶ್ವಕರ್ಮರು. ಭಗವದ್ಗೀತೆಯು ಜ್ಞಾನ ವಿಜ್ಞಾನಗಳ ಕರ್ತೃ ವಿಶ್ವಕರ್ಮ. ಅವನೇ ಶಿಲ್ಪಬ್ರಾಹ್ಮಣ ಅಥವಾ ವಿಶ್ವಬ್ರಾಹ್ಮಣ ಎಂದು ಹೇಳುತ್ತದೆ. ಜ್ಞಾನವೆಂದರೆ ಯಜನ, ಯಾಜನ, ವೇದಾಧ್ಯಯನ ಇತ್ಯಾದಿ ತಾತ್ವಿಕ ಸ್ವರೂಪದ್ದು. ವಿಜ್ಞಾನವೆಂದರೆ ಶಿಲ್ಪ, ಶ್ರೋತ್ರ ಸಂಬಂಧವಾದ ಪ್ರಾಯೋಗಿಕ ರೂಪದ್ದು ಎಂದು ಅಮರಕೋಶವು ಉಲ್ಲೇಖಿಸುತ್ತದೆ.

ಕಮ್ಮಾರ, ಬಡಿಗ, ಕಂಚುಗಾರ, ಶಿಲ್ಪಿ, ಅಕ್ಕಸಾಲಿ ಈ ಐದು ವೃತ್ತಿಗಳು ಕ್ರಿಯೆ, ಜ್ಞಾನ, ಕೌಶಲ್ಯದ ಇಡೀತನವನ್ನೇ ಹೇಳುತ್ತವೆ. ಈ ಐದು ಕೌಶಲ್ಯಗಳು ಸಂಯೋಜಿತ ಜ್ಞಾನದ ಫಲಿತಗಳು. ಪಂಚ ಕಸುಬುಗಳು ಕೇವಲ ಕೆಲಸಗಳೂಅಲ್ಲ,ಸೇವೆಗಳೂಅಲ್ಲ.ಅವುಜ್ಞಾನ, ವಿಜ್ಞಾನ, ತಂತ್ರಜ್ಞಾನಗಳ ತಾಯಿ. ಮನುಷ್ಯ ನಾಗರೀಕತೆಯ ಬೆಳವಣಿಗೆಯಲ್ಲಿ ಪಂಚಾಳ ವೃತ್ತಿಗಳ ಪಾಲು ಬಹುದೊಡ್ಡದು. ಯಾವುದೇ ಒಂದು ವೃತ್ತಿಯ ಬೆಳವಣಿಗೆ ಎನ್ನುವುದು ಕೇವಲ ಕೌಶಲ್ಯದ ವರ್ಗಾವಣೆಯಲ್ಲ. ಅದು ಮನುಷ್ಯನ ಪ್ರಜ್ಞೆ ಮತ್ತು ಪ್ರತಿಭೆಯಿಂದ ಅರಳುವಂಥ ಸೃಜನಶೀಲ ಸಂವೇದನೆ. ಮನುಷ್ಯನ ಪ್ರಜ್ಞಾಸ್ತರವನ್ನೇ ಪ್ರೇರಣೆಯ ಮುಖ್ಯ ನೆಲೆಯಾಗಿಸಿಕೊಂಡು ಹುಟ್ಟಿರುವ ಪಾಂಚಾಳ ಕೌಶಲ್ಯಗಳು,ಜನ ಬದುಕು ಹಾಗೂ ಪರಿಸರವನ್ನು ಪ್ರಜ್ಞಾಪೂರ್ವಕವಾಗಿಯೇ ಪರಿಶೀಲಿಸಿ ತಮ್ಮ ಅಭಿವ್ಯಕ್ತಿ ಮತ್ತು ರೂಪಕಾ–ರಿಕೆಯ ವಸ್ತುವನ್ನಾಗಿ ಆರಿಸಿಕೊಳ್ಳುತ್ತವೆ.

ಅಥರ್ವಶ್ರುತಿ ಹೇಳುವಂತೆ ವಿಶ್ವಕರ್ಮನೆಂದರೆ 'ವಾಚಸ್ಪತಿ'. ವಾಣಿಯ(ಮಾತು) ಮೂಲಕ ಉಂಟಾಗುವ ಎಲ್ಲಾ ವಿಧದ ಜ್ಞಾನಕ್ಕೆ ಕರ್ತೃಸ್ಥಾನದಲ್ಲಿರುವವನು. ಅವನು 'ಚಕ್ಷುಪಿತ'. ಮನುಷ್ಯನ ಜ್ಞಾನೇಂದ್ರಿಯಗಳಲ್ಲಿ ಕಣ್ಣಿಗೆ ಪ್ರಮುಖ ಸ್ಥಾನವಿದೆ. ಹೀಗೆ 'ಜ್ಞಾನಚಕ್ಷು' ವಾದ ವಿಶ್ವಕರ್ಮನಿಗೆ ಪ್ರಥಮಾದ್ಯತೆ ಇದೆ. ಅಂತಃಚಕ್ಷು ಅಥವಾ ದರ್ಶನಾಶೀಲತೆಯು ಶಿಲ್ಪ ನಿರ್ಮಾಣದ ಮುಖ್ಯ ಸೆಲೆ. ಇದನ್ನೇ ಮನಶಾಸ್ತ್ರಜ್ಞ ಯೂಂಗ್ ದಾರ್ಶನಿಕತೆ(ಗಿು–ಂಠಟಿಚಿಡಿಥಿ)ಎಂದು ಕರೆಯುತ್ತಾನೆ. ಶಿಲ್ಪಿಯು ಇಂತಹ ಅಂತರ್‌ದರ್ಶನ ಪ್ರಜ್ಞೆಯ ಮೂಲಕವೇ ಆತ್ಮಾಭಿವ್ಯಕ್ತಿಯನ್ನು ಮಾಡುವ ಉತ್ಕಟ ಆಕಾಂಕ್ಷೆಯನ್ನು ಪಡೆದುಕೊಳ್ಳುತ್ತಾನೆ. ಆತ್ಮಾಭಿಮಾನವನ್ನು ಅರ್ಥಮಾಡಿಕೊಳ್ಳಲು ಶಿಲ್ಪಿಗೆ ಸುಪ್ತಾವ್ಯಸ್ಥೆಯ ಜ್ಞಾನ ಬಹುಮುಖ್ಯ.

ಮನಶಾಸ್ತ್ರದಲ್ಲಿ ಸುಪ್ತಚೇತನ(ಕಜಢಿಂಟಿಟ ಗಟಿಛಿಂಟಿಛಿಒಚಿಣಾ) ಹಾಗೂ ಸಾಮೂಹಿಕ ಸುಪ್ತಚೇತನ(ಅಂಟಟಜಛಿಣಿಖತಜ ಗಟಿ–ಛಿಂಟಿಛಿಒಚಿಣಾ)ಎಂದು ಎರಡು ಧಾರೆಗಳಿವೆ. ಸಾಮೂಹಿಕ ಸುಪ್ತಚೇತನವು ಮಾನವನ ಇಡೀ ಅನುಭವದ ಸಾರವಾಗಿರುತ್ತದೆ. ಪ್ರಕೃತಿಯಲ್ಲಿ ಜೀವಿ ಬದುಕಿದ್ದಾಗಿನಿಂದ ಬಂಧ ಅನುಭವಗಳೆಲ್ಲವೂ ಸಾಮೂಹಿಕ ಸುಪ್ತಚೇತನದಲ್ಲಿ ಪಕ್ವವಾಗಿ ಆನುವಂಶಿಕವಾಗಿ ಬೆಳೆಯುತ್ತವೆ. ಇದನ್ನು 'ಆರ್ಕಿಟೈಪ್ಸ್' ಎಂದು ಯೂಂಗ್ ಕರೆಯುತ್ತಾನೆ. ಸುಪ್ತಾವಸ್ಥೆಯ ಈ ಸಾಮೂಹಿಕ ಪದರಿನಿಂದ ಕಲೆಯ ಪ್ರೇರಣೆ ಹುಟ್ಟುತ್ತದೆ. ಸಾಮೂಹಿಕ ಸುಪ್ತಾವಸ್ಥೆಯಿಂದ ಪ್ರೇರಣೆ ಪಡೆಯುವುದೆಂದರೆ ಇಡೀ ಮಾನವತೆಗೆ ಅಭಿವ್ಯಕ್ತಿಯನ್ನೀಯುವುದು. ಒಂದು ಯುಗದ ಅನುಭವವನ್ನು ತನ್ನ ಮುಂದೆ ಮತ್ತು ಜನಾಂಗದ ಮುಂದೆ ದರ್ಶಿಸುವುದು. ಇಂತಹ ದರ್ಶನದಿಂದ ಮಾನವನೂ ಮಾನವತೆಯನ್ನು ಪಡೆದು ಪೂರ್ಣ ಮಾನವನಾಗುತ್ತಾನೆ. ಶಿಲ್ಪಾಭಿವ್ಯಕ್ತಿಗಳು ಒಂದು ಜನಾಂಗದ ಒಂದು ಯುಗದ ಚಿಂತನೆಗಳ ಸಂಯುಕ್ತ ಅಭಿವ್ಯಕ್ತಿಗಳು. ರಾಮ, ಕೃಷ್ಣ, ಈಶ್ವರ, ಗಣಪತಿ, ಯಾವುದೇ ದೈವ ಅಥವಾ ಮಾನವ ಶಿಲ್ಪಗಳು ಅರಮನೆ, ಕೋಟೆ ಕೊತ್ತಲಗಳು ಶಿಲ್ಪಿಯ ವೈಯಕ್ತಿಕ ದರ್ಶನದ ಆವಿಷ್ಕಾರಗಳೂ ಆದಂತೆ, ಅವು ಒಂದು ಜನಾಂಗದ, ಒಂದು ಕಾಲಧರ್ಮದ, ಒಂದು ಸಂಸ್ಕೃತಿಯ ವೈಚಾರಿಕ ಪ್ರಜ್ಞೆಗಳೂ ಹೌದು. ವಿಶ್ವಕರ್ಮ ಆತ್ಮ ಸಂಸ್ಕೃತಿಯ ಪ್ರತೀಕ. ಇಂತಹ ಆತ್ಮ ಸಂಸ್ಕೃತಿಯ ಪ್ರತೀಕವಾದ ಶಿಲ್ಪಗಳ ಆರಾಧನೆಯಿಂದ, ಆರಾಧಕ ತನ್ನನ್ನು ತಾನು ಸಂಸ್ಕಾರ ಮಾಡಿಕೊಳ್ಳಬೇಕೆಂದು ಐತ್ತರೇಯ ಬ್ರಾಹ್ಮಣ ಹೇಳುತ್ತದೆ. ಅಂತಹ ಅಂತರ್ ದರ್ಶನವುಳ್ಳ ಶಿಲ್ಪಿಯೇ ವಿಶ್ವಕರ್ಮ ಅಥ–ವಾ ಪಂಚಾಳ. ಶೈವಾಗಮದಲ್ಲಿ 'ಸ್ವರ್ಣಾದಿ ಶಿಲ್ಪಗಳಿಂದ ಲೋಕೋಪಕಾರಿಯಾಗಿ ಲೋಕ ಸೌಂದರ್ಯವನ್ನು ಹೆಚ್ಚಿಸುವವನೇ ಪಾಂಚಾಳ' ಎಂದು ಹೇಳಲಾಗಿದೆ.

ಈ ಅರ್ಥದಲ್ಲಿ ವಿಶ್ವಕರ್ಮರೆಂದರೆ ಕೇವಲ ಕಲ್ಲು, ಕಟ್ಟಿಗೆ, ಚಾಣ, ಸುತ್ತಿಗೆ ಕೆಲಸದವರಲ್ಲ. 'ಶೀಲಸಮಾಧೌ'ಅಂದರೆಶಿಲ್ಪಿಯುಲೌಕಿಕದಲ್ಲಿ ಇದ್ದೇ ಸಮಾಧಿ ಸ್ಥಿತಿಯನ್ನು ಹೊಂದಿ ಮನೋನಿಗ್ರಹದಿಂದ ಸಮಚಿತ್ತದಿಂದ ಆಕೃತಿ ನಿರ್ಮಾಣ ಮಾಡುತ್ತಾನೆ. ನಿಷ್ಕಾಮಕರ್ಮ ಹಾಗೂ ಶುದ್ಧಜ್ಞಾನ ರೂಪದಿಂದ ಮಹೋನ್ನತವಾದ ಶಿಲ್ಪವನ್ನು ವಸ್ತು ಭೇದವಿಲ್ಲದೆ ಗುಣ ಭೇದವಿಲ್ಲದೆ ಯಾವನು ರೂಪಿಸುತ್ತಾನೋ ಅವನೇ ವಿಶ್ವಕರ್ಮ.

ಶಿಲ್ಪ ಎಂದರೆ ಕೆತ್ತುವುದು ಅಲ್ಲ. ಅದೊಂದು ಆತ್ಮ ಸಂಸ್ಕಾರ. ಕಲ್ಲು, ಕಟ್ಟಿಗೆ, ಲೋಹದಂತಹ ಧಾತುಗಳಲ್ಲಿನ ಜೀವ ಚೈತನ್ಯವನ್ನು ಅರಿತು ಉಳಿ, ಸುತ್ತಿಗೆ, ಬಾಚಿ, ಕೊಡತಿಗಳನ್ನು ವಿವೇಕಯುತವಾಗಿ ಬಳಸಿ ಸಂಸ್ಕರಿಸಿ ಭಕ್ತಿ ಹಾಗೂ ಸೌಂದರ್ಯ ಭಾವನೆಗಳನ್ನು ತುಂಬುವವರೇ ವಿಶ್ವಕರ್ಮರು. ಇಂತಹ ಆತ್ಮ ಸಂಸ್ಕಾರದ ಪ್ರಕ್ರಿಯೆಯಲ್ಲಿ ಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರವಾಗುತ್ತದೆ. ಭಗವದ್ಗೀತೆಯು

**ಜ್ಞಾನ ವಿಜ್ಞಾನ ತೃಪ್ತಾತ್ಮಾಕೂಟಸ್ಥೋ ವಿಜಿತೇಂದ್ರೀಯ:।**
**ಯುಕ್ತ ಇತ್ಯುಚ್ಯತೇ ಯೋಗಿ ಸಮತೋಷ್ಣಾಸ್ಮಕಾಂವಚನಃ।**

ಅಂದರೆ ಜ್ಞಾನ ಮತ್ತು ವಿಜ್ಞಾನಗಳಿಂದ ಆವೃತವಾದವನೂ, ತೃಪ್ತನಾದವನೂ, ಆತ್ಮಜ್ಞಾನಿಯೂ ಆದವನೇ ವಿಶ್ವಕರ್ಮ. ತೃಪ್ತಿ ಎಂದರೆ ಪರಿಪೂರ್ಣತ್ವ. ಅಂದರೆ ದರ್ಶನ ಪ್ರಜ್ಞೆಯುಳ್ಳವನು, ಎಲ್ಲವನ್ನೂ ತಿಳಿದವನು ಎಂದರ್ಥ. ಶಿಲ್ಪಶಾಸ್ತ್ರವನ್ನು ಅಮರಕೋಶವು ವಿಜ್ಞಾನವೆಂದು ಕರೆಯುತ್ತದೆ. ವಿಜ್ಞಾನವನ್ನು ವಿಶ್ವಕರ್ಮ ಪರಬ್ರಹ್ಮನೆಂದು ಉಪನಿಷತ್ತುಗಳು ಹೇಳುತ್ತವೆ. ವಿಶ್ವಕರ್ಮ ಕೌಶಲ್ಯಗಳು ಕೇವಲ ವೃತ್ತಿಗಳಲ್ಲ. ಶಿಲ್ಪಿಯೊಬ್ಬನ ಪ್ರಜ್ಞೆ ಮತ್ತು ಪ್ರತಿಭೆಯಲ್ಲಿ ಅರಳಿದ ಸೃಜನಶೀಲ ಸಂವೇದನೆಗಳು. ವಿಶ್ವಕರ್ಮ ವೃತ್ತಿ ಮತ್ತವರ ಅವಶ್ಯಕತೆಗಳು, ಅನ್ವೇಷಣೆಗಳು, ಅವರ ಉಪಕರಣ ಸಂಸ್ಕೃತಿ ಮತ್ತು ಪ್ರಕ್ರಿಯೆಗಳು, ಕೇವಲ ಉಪಯೋಗ ಹಾಗೂ ಉಪಭೋಗಕ್ಕೆ ಮಾತ್ರ ಹುಟ್ಟಿಲ್ಲ. ಅವು ವಿಶ್ವಕರ್ಮರ ಮಾನಸಿಕ ಪ್ರಕ್ರಿಯೆಗಳಾದ ಭಾವಿಸುವ, ಕಲ್ಪಿಸುವ, ಆಲೋಚಿಸುವ, ದರ್ಶಿಸುವ ಹಾಗೂ ಪ್ರಯೋಗಕ್ಕೆ ಅಳವಡಿಸುವ ಪ್ರಕ್ರಿಯೆಯಿಂದ ಮೂಡಿದಂತವು.

ಈ ಅರ್ಥದಲ್ಲಿ ವಿಶ್ವಕರ್ಮರ ಜ್ಞಾನ ಮತ್ತು ಕರ್ಮಗಳೆಂದರೆ, ತತ್ತ್ವಜ್ಞಾನ, ತಂತ್ರಜ್ಞಾನ ಹಾಗೂ ಸಂಸ್ಕೃತಿ ಜ್ಞಾನಗಳಾಗಿವೆ. ಇವೆಲ್ಲವೂ ಪ್ರಕೃತಿಯನ್ನು, ಮಾನವ ಸ್ವಭಾವಗಳನ್ನು ಅರ್ಥೈಸಿಕೊಳ್ಳುವ ಮತ್ತು ಅದರಲ್ಲಿರುವ ಚಲನಶೀಲತೆಯನ್ನು ಗ್ರಹಿಕೆಗೆ ತಂದುಕೊಳ್ಳುವ ವಾಹಕಗಳು. ವಿಶ್ವಕರ್ಮ ಕೌಶಲ್ಯಗಳು, ವಿಶ್ವಕರ್ಮರ ಅನುಭವ, ಗ್ರಹಿಕೆ, ದರ್ಶನ ಮತ್ತು ನಿರಂತರ ಆಗುವಿಕೆಯಿಂದ ಸಿದ್ಧಿಸಿವೆ. ಇದನ್ನೇ ಆಧುನಿಕ ಪರಿಭಾಷೆಯಲ್ಲಿ ಜ್ಞಾನ(ಅನುಭವ), ವಿಜ್ಞಾನ(ಗ್ರಹಿಕೆ) ತಂತ್ರಜ್ಞಾನವೆಂದು(ಪ್ರಯೋಗ) ನಾನು ಅಥ–ರ್ೈಸುತ್ತೇನೆ.

ಕಸುಬು, ಕಲೆಗಾರಿಕೆ, ವ್ಯವಸಾಯ, ಶಿಲ್ಪ, ಉಪಕರಣಗಳು, ನಗರನಿರ್ಮಾಣ, ಸರಕು ಸಾಗಾಣೆ ವಾಹನಗಳು, ವಿಮಾನ, ಲೋಹಶೋಧ, ಲೋಹಪರೀಕ್ಷೆ, ಲೋಹಪ–ರಿವರ್ತನೆ ಮತ್ತು ಲೋಹ ಸಂಯೋಗ ವಿಧಾನಗಳು ಕಲ್ಲು, ಕಟ್ಟಿಗೆ, ಹಿತ್ತಾಳೆ, ಕಬ್ಬಿಣ, ಚಿನ್ನ,ಬೆಳ್ಳಿ,ಮಣ್ಣು ಇವುಗಳ ಕರಗುವಿಕೆ ಹಾಗೂ ಆಗುವಿಕೆ ಇವೆಲ್ಲವೂ ಸಾಂಪ್ರದಾಯಿಕ ಅಥ–ರ್ದಲ್ಲಿ ಜ್ಞಾನ ವಿಜ್ಞಾನಗಳೇ ಆಗಿವೆ. ತಿಂತಿಣಿ ಮೌನೇಶ್ವರರು ಹೇಳುವಂತೆ 'ಕರಗಿ ಮಾಡಲೀ ಬಲ್ಲ, ಒರೆದು ನೋಡಲಿ ಬಲ್ಲ, ಪರಿಪರಿಯ ಆಯುಧವ ಪರರಿಗೆ ಮಾಡಿಕೊಡುವವರೇ' ವಿಶ್ವಕರ್ಮ. ಕಾಸುವ, ಕರಗುವ, ಬಡಿಯುವ, ರೂಪಿಸುವ,ಸಂಸ್ಕರಿಸುವ,ಸುಂದರೀಕರಿಸುವ ಈಯಾವಕ್ರಿಯೆಗಳೂಪ್ರತ್ಯೇಕವಲ್ಲ.ಅವೆಲ್ಲವೂ ಒಂದು ಪ್ರಕ್ರಿಯೆಯ ವಿವಿಧ ಹಂತಗಳು. ಜ್ಞಾನ, ವಿಜ್ಞಾನ, ತಂತ್ರಜ್ಞಾನದ ಬೀಜಾಂಕುರಗಳು. ಆದರೆ ಯುರೋಪ ಕೇಂದ್ರಿತ ಅಕ್ಷರದ ಅಹಂಕಾರಗಳು ಇಂತಹ ದೇಸಿ ಜ್ಞಾನ, ವಿಜ್ಞಾನ, ತಂತ್ರಜ್ಞಾನಗಳನ್ನು ಅಲ್ಲಗಳೆದು, ಆಧುನಿಕ ವಿಜ್ಞಾನದ ಹುಸಿ ಕೊಡುಗೆಗಳನ್ನು ಎತ್ತಿ ತೋರಿಸುತ್ತಿವೆ. ದೇಶವೊಂದರ ಸಮಗ್ರ ಅಭಿವೃದ್ಧಿ ಸಾಧ್ಯವಾಗುವುದು ಬಹು ಜನರ ಕ್ರಿಯಾಶೀಲತೆಯಿಂದ, ಹೊರತು ಕೇವಲ ಅಧಿಕಾರ ಹಾಗೂ ಸಂಪತ್ತಿನಿಂದ ಅಲ್ಲ ಎನ್ನುವುದನ್ನು ವಿಶ್ವಕರ್ಮರ ಪ್ರಾಚೀನ ಜ್ಞಾನ ವಿಜ್ಞಾನಗಳು ತೋರಿಸಿಕೊಟ್ಟಿವೆ.

ಅನುಭವ ಜನ್ಯವಾದ ಹಾಗೂ ಸದಾ ಪ್ರಯೋಗಶೀಲವಾದ ವಿಶ್ವಕರ್ಮರ ಜ್ಞಾನ ವಿಜ್ಞಾನಗಳು ಪದಾರ್ಥ ಜಗತ್ತಿನ ಲಕ್ಷಣಗಳನ್ನು ತಿಳಿದುಕೊಳ್ಳುವ ತಂತ್ರಗಳು ಮಾತ್ರವಲ್ಲ. ಪ್ರಕೃತಿ ಮತ್ತು ಮಾನವ ಜಗತ್ತಿನ ಸಂಕೀರ್ಣತೆಗಳನ್ನು ತಿಳಿಯುವ ಕ್ರಮಗಳಾಗಿವೆ. ಇದನ್ನೇ ನಾನು ವಸ್ತು ಜ್ಞಾನ, ವಿಷಯ ಜ್ಞಾನ ಹಾಗೂ ಉಪಕರಣ ಜ್ಞಾನವೆಂದು ಕರೆಯುತ್ತೇನೆ. ವಸ್ತು ಜ್ಞಾನವೆಂದರೆ ಭೌತಿಕ ವಸ್ತುಗಳ(ಒಚಿಣಡಿ–ಥಿಚಿಟ ಖಿಬಿಜಟಿಛಿಜ) ಆಂತರ್ಯವನ್ನ ಅರಿಯುವುದು. ಅದರೊಳಗಿನ ಚೈತನ್ಯವನ್ನು ತಿಳಿಯುವುದು. ವಿಷಯ ಜ್ಞಾನವೆಂದರೆ, ಭೌತಿಕ ತಿಳುವಳಿಕೆಯನ್ನು ಸಾಮಾಜಿ–ಕ ವಿವೇಕವನ್ನಾಗಿ ಪರಿವರ್ತಿಸುವುದು. ಉಪಕರಣ ಜ್ಞಾನವೆಂದರೆ ಗುಣ ಮತ್ತು ಸ್ವಭಾವ ಭೇದವಿಲ್ಲದೆ ವಸ್ತುವಿನಲ್ಲಿನ ವಿಷಯವನ್ನು ಅಥವಾ ಆಕೃತಿಯನ್ನು ಉಪಕರಣಗಳ ಮೂಲಕ ಅನಾವರಣ ಮಾಡಿ ಲೋಕ ಬಳಕೆಗೆ ಸಾಧ್ಯವಾಗಿಸುವುದು. ಸಾಂಸ್ಕೃತಿ–ಕ ದರ್ಶನವನ್ನಾಗಿಸುವುದು. ಈ ಅರ್ಥದಲ್ಲಿ ಜಗತ್ತಿನ ಚೇತನ ಅಚೇತನಗಳಲ್ಲಿ ಅಸಾಧಾರಣ ಚೈತನ್ಯ ತುಂಬಿ ಮಾನವ ಕುಲದ ಸೌಂದರ್ಯ ಹಾಗೂ ಸ್ವಾಸ್ಥ್ಯ ಬದುಕಿಗೆ ಕಾರಣವಾಗುತ್ತ ಬಂದವರೇ ವಿಶ್ವಕರ್ಮರಾಗಿದ್ದಾರೆ. ವಿಶ್ವಕರ್ಮ ಎನ್ನುವುದೇ ಜ್ಞಾನವೆಂಬ ಒಳಗಣ್ಣಿನಿಂದ ತನ್ನನ್ನು ತಾನು ಬೆಳಗಿಕೊಂಡು ತನ್ನೆದುರಿನ ಲೋಕವನ್ನು ಬೆಳಗಿ ಸಂಸ್ಕರಿಸುವ ಹಾಗೂ ಸುಂದರೀಕರಿಸುವ ತತ್ತ್ವವಾಗಿದೆ.

**ಡಾ. ವೀರೇಶ ಬಡಿಗೇರ**
**ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ**
**ಕನ್ನಡ ವಿಶ್ವವಿದ್ಯಾಲಯ, ಹಂಪಿ**

# ಸಾಹಿತ್ಯ ಕ್ಷೇತ್ರಕ್ಕೆ ತನ್ನದೇಯಾದ ವಿಶೇಷ ಕೊಡುಗೆ ನೀಡಿದ ಹಲಸಂಗಿ ಗೆಳೆಯರ ಬಳಗ: ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ಧರಾಮಯ್ಯ



**ವಿಜಯಪುರ :** ವಿಜಯಪುರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಲಸಂಗಿ ಗೆಳೆಯರ ಪ್ರತಿಷ್ಠಾನ ಹಾಗೂ ಜೈನ್ (ಡೀಮ್ಡ್ ಟು ಬಿ ಯೂನಿವರ್ಸಿಟಿ)ಯ ಕನ್ನಡ ಭಾಷಾ ವಿಭಾಗದ ಸಹಯೋಗದಲ್ಲಿ ಬೆಂಗಳೂರಿನ ಜಯನಗರದ 9 ನೇ ಬಡಾವಣೆಯಲ್ಲಿರುವ ಜೆ ಜಿ ಐ ನಾಲೆಡ್ಜ್ ಕ್ಯಾಂಪಸ್ ನಲ್ಲಿ ಹಲಸಂಗಿ ಗೆಳಯರ ಬದುಕು ಮತ್ತು ಬರಹ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮವನ್ನು ನಾಡಿನ ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯನವರು ಉದ್ಘಾಟಿಸಿ ಮಾತನಾಡಿ, ಹಲಸಂಗಿ ಗೆಳೆಯರ ಬಳಗವು ಕನ್ನಡ ನವೋದಯ ಸಾಹಿತ್ಯ ಕ್ಷೇತ್ರಕ್ಕೆ ತನ್ನದೇಯಾದ ವಿಶೇಷ ಕೊಡುಗೆ ನೀಡಿದ್ದು, ಜನಪದ ಸಾಹಿತ್ಯ ಮತ್ತು ದೇಶಿ ಸಾಹಿತ್ಯದ ಪ್ರಭಾವಕ್ಕೆ ಒಳಗಾದ ಹಲಸಂಗಿ ಗೆಳೆಯರು ಅದರಲ್ಲೇ ಸಾಹಿತ್ಯ ಕೃಷಿ ಮಾಡಿದವರು.ಇನ್ನು ಗೆಳೆಯರ ಬಳಗದ ಅತ್ಯದ್ಭುತ ಕೆಲಸವೆಂದರೇ ಅದು ಜನಪದ ಗೀತೆಗಳ ಸಂಗ್ರಹ.ಅದರಲ್ಲೂ ಗರತಿಯ ಹಾಡುಗಳು ಅದ್ವಿತೀಯ ಸಂಗ್ರಹವಾಗಿದೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಲೆ, ಸಾಹಿತ್ಯ, ಜಾನಪದ ಹಾಗೂ ರಂಗಭೂಮಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹನೀಯರ ಹೆಸರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿ ಟ್ರಸ್ಟ್‌ಗಳನ್ನು ರಚನೆ ಮಾಡಿದೆ, ಆದರೆ ಗೆಳೆಯರ ಬಳಗದ ಹೆಸರಿನಲ್ಲಿರುವ ಸ್ಥಾಪಿಸಿರುವ ಏಕಮಾತ್ರ ಟ್ರಸ್ಟ್ ಹಲಸಂಗಿ ಗೆಳೆಯರ ಪ್ರತಿಷ್ಠಾನವಾಗಿದ್ದು, ಇದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ ಎಂದು ಅವರು ಹೇಳಿದರು.

ಹಲಸಂಗಿ ಗೆಳೆಯರ ಬಳಗದಲ್ಲಿ ಯಾವುದೇ ಜಾತಿ,ಧರ್ಮದ ಭೇದ ಭಾವಗಳಿರಲಿಲ್ಲ ಸಾಹಿತ್ಯ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ವಿಶೇಷ ಬಳಗವಾಗಿದ್ದು, ಬೇರೆ ಗೆಳೆಯರ ಬಳಗಕ್ಕೆ ದೊರೆತ ಮನ್ನಣೆ ಈ ಬಳಗಕ್ಕೆ ಸಿಗಲಿಲ್ಲ ಎಂಬುದು ವಿಷಾದವನ್ನುಂಟು ಮಾಡಿದೆ ಎಂದರು. ಹಾಗೆಯೇ ಹಲಸಂಗಿ ಗೆಳೆಯರು ಬರೀ ಸಾಹಿತ್ಯ ಕೃಷಿಗೈಯದೇ ಗೆಳೆಯರ ಬಳಗದ ಪಿ ಧೂಲಾ ಸಾಹೇಬರು ಸ್ವಾತಂತ್ರ್ಯ ಸಿಗುವರೆಗೂ ತಮ್ಮ ಕೇಶವನ್ನು ಕತ್ತರಿಸುವುದಿಲ್ಲ ಹಾಗೂ ಕಾಲಲ್ಲಿ ಚಪ್ಪಲಿಯನ್ನು ಹಾಕುವುದಿಲ್ಲ ಎಂಬ ಶಪತದ ದೇಶಪ್ರೇಮ ಮೆರೆದ ಘಟನೆಯನ್ನು ನೆನಪಿಸಿದರು.ಹಲಸಂಗಿ ಗೆಳೆಯರ ಬಳಗದ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವುದು ಒಳ್ಳೆಯ ಬೆಳವಣಿಗೆ ಎಂದು ಅಭಿಮಾನವನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜೈನ್ (ಡೀಮ್ಡ್ -ಟು -ಬಿ ಯೂನಿವರ್ಸಿಟಿ)ಯ ಪ್ರಾಧ್ಯಾಪಕ ಡಾ.ರಾಜಕುಮಾರ ಬಡಿಗೇರ ಉಪನ್ಯಾಸ ನೀಡಿ, ಹಲಸಂಗಿ ಗೆಳೆಯರ ಬಳಗವು ಜಾತ್ಯಾತೀತ ನಿಲುವಿನ ಹಿನ್ನೆಲೆಯಲ್ಲಿ ಕಟ್ಟಿದ ಗೆಳೆಯರ ಬಳಗವಾಗಿದೆ. ಇದು ಈಗಿನ ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಹಲಸಂಗಿ ಗ್ರಾಮದಲ್ಲಿ ಮಧುರಚೆನ್ನ, ಸಿಂಪಿ ಲಿಂಗಣ್ಣ,ಪಿ.ಧೂಲಾ ಸಾಹೇಬ,ಕಾಪಸೆರೇವಪ್ಪ, ಮಾದಣ್ಣ ಓಲೇಕಾರ, ಗುರುಬಸಪ್ಪ ಗಲಗಲಿ, ಚೆನ್ನಬಸಪ್ಪ ಸರಸಂಬಿ, ಆದಮ್ ಸಾಬ್ ಮಸಳಿ, ಶಿವಲಿಂಗಪ್ಪ ಸರಸಂಬಿ ಮೊದಲಾದವರು ಕೂಡಿ ಕಟ್ಟಿದ ಬಳಗವಾಗಿದೆ. ಬಳಗದ ಸದಸ್ಯರು ಹಲಸಂಗಿಯ ವಿವಿಧ ಸಮುದಾಯದ ತಾಯಂದಿರ ಹಾಗೂ ಜಿಲ್ಲೆಯಾದ್ಯಂತ ಜನಪದ ಹಾಡುಗಳ ಬಲ್ಲ ತಾಯಂದಿರನ್ನು ಸಂಪರ್ಕಿಸಿ ಜನಪದ ಹಾಡುಗಳನ್ನು ಸಂಗ್ರಹಿಸುವ ಅದ್ಭುತ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದರ ಪ್ರತಿಫಲವೇ ಗರತಿಯ ಹಾಡುಗಳು, ಜೀವನ ಸಂಗೀತ ಹಾಗೂ ಮಲ್ಲಿಗೆ ದಂಡೆಯಂತ ಅನರ್ಘ್ಯ ಕೃತಿಗಳು ಹೊರ ಹೊಮ್ಮಿದವು. ಅಲ್ಲದೇ ನನ್ನನಲ್ಲ ದಂತ ಅನುಭಾವ ಸಾಹಿತ್ಯ ಕೃತಿಯನ್ನು ನೀಡಿ ನವೋದಯದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನುಭಾವ ಸಾಹಿತ್ಯ ರಚನೆಗೆ ಕಾರಣಿಭೂತರಾದರು, ಸಾಹಿತ್ಯ ಸಿರಿಯನ್ನು ಹೆಚ್ಚಿಸಿದರು. ನಾಡ ಕಟ್ಟುವಲ್ಲಿ ಅವಿರತವಾಗಿ ದುಡಿದ ಮಹನೀಯರು ನಾಡ ಹಬ್ಬ ಹಂಪಿ ಉತ್ಸವ ಮೊದಲಾದವುಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕನ್ನಡ ಭಾಷೆ ,ಸಂಸ್ಕೃತಿಗೆ ಧ್ವನಿಯಾದರು. ಪ್ರಸ್ತುತದಲ್ಲಿ ಪ್ರತಿಷ್ಠಾನವು ಗೆಳೆಯರ ಬಳಗದ ಹೆಸರಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಗುರುತರ ಕಾರ್ಯ ಮಾಡುತ್ತಿರುವುದು ಪ್ರಶಂಸನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಭಾಷಾ ವಿಭಾಗದ ಮುಖ್ಯಸ್ಥ ಪ್ರೊ.ಎಂ ಕೆ ಶ್ರೀಧರ್ ಮಾತನಾಡಿ, ಹಲಸಂಗಿ ಗೆಳೆಯರ ಸಾಹಿತ್ಯ ವಿಜಯಪುರ ಜಿಲ್ಲೆಗೆ ಮಾತ್ರ ಸೀಮಿತವಾಗಿರಿಸದೆ ಎಲ್ಲರೂ ಅವರ ಸಾಹಿತ್ಯವನ್ನು ಅಧ್ಯಯನ ಮಾಡಬೇಕು. ಪ್ರತಿಷ್ಠಾನದ ಇಂತಹ ಕಾರ್ಯಕ್ರಮವನ್ನು ನಮ್ಮ ಜೈನ್ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿರುವುದು ಹರ್ಷವನ್ನುಂಟು ಮಾಡಿದೆ. ಹಾಗಾಗಿ ಇಲಾಖೆಗೆ ಹಾಗೂ ಪ್ರತಿಷ್ಠಾನಕ್ಕೆ ನನ್ನ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ವಿಜಯಪುರ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಅತಿಥಿಗಳನ್ನು ಸ್ವಾಗತಿಸಿ, ಪ್ರತಿಷ್ಠಾನದ ಕಿರು ಪರಿಚಯವನ್ನು ನೀಡಿದರು. ಪ್ರತಿಷ್ಠಾನಾದ ಸದಸ್ಯರಾದ ದಾಕ್ಷಾಯಣಿ ಬಿರಾದಾರ ಪ್ರಾಸ್ತವಿಕವಾಗಿ ಮಾತನಾಡಿದರು. ಕನ್ನಡ ಭಾಷಾ ವಿಭಾಗದ ಮುಖ್ಯಸ್ಥ ರಾಜೇಶ್ವರಿ ವೈ ಎಂ., ಮಧುರ ಚೆನ್ನರ ಮೊಮ್ಮಕ್ಕಳಾದ ಜಯಶ್ರೀ ಗಲಗಲಿ, ಸತ್ಯವತಿ ಗಲಗಲಿ ಹಾಗೂ ಸಿಂಪಿ ಲಿಂಗಣ್ಣನವರ ಮೊಮ್ಮಕ್ಕಳಾದ ಸ್ನೇಹಲತಾ, ಮರಿ ಮೊಮ್ಮಗಳಾದ ರೋಹಿಣಿ ,ಕೆ ಎಸ್ ನರಸಿಂಹಸ್ವಾಮಿಯವರ ಮೊಮ್ಮಗಳಾದ ಡಾ.ಮೆಖಲಾ ವೆಂಕಟೇಶ್ ಮತ್ತು ಕುಟುಂಬದವರು ಹಾಗೂ ವಿಶ್ವ ವಿದ್ಯಾಲಯದ ವಿವಿಧ ವಿಭಾಗದ ಪ್ರಾಧ್ಯಾಪಕರು,ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅಂತರಾಷ್ಟ್ರೀಯ ಖ್ಯಾತಿಯ ಲಕ್ಷ್ಮಣ ನೆಲಸೊಗಡು ಕಲಾ ತಂಡದವರು ಜನಪದ ಗಾಯನ ಕಾರ್ಯಕ್ರಮ ನೆರವೇರಿಸಿ ಕೊಟ್ಟರು.ಪದವಿ ಅಂತಿಮ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಾದ ತ್ರಿಷಾ ಹಾಗೂ ಶ್ರಾವ್ಯ ಕಾರ್ಯಕ್ರಮ ನಿರೂಪಿಸಿದರು.

# ಪ್ರವಾಸೋದ್ಯಮ ಅಭಿವೃದ್ಧಿಯೊಂದಿಗೆ ಪರಿವರ್ತನೆಯೆಡೆಗೆ ಸಾಗುತ್ತಿರುವ ಜಿಲ್ಲೆ: ಶಾಸಕ ವಿಠ್ಠಲ ಕಟಕದೊಂಡ



**ವಿಜಯಪುರ :** ಬರಗಾಲ ಜಿಲ್ಲೆ ಎಂದು ಪ್ರಸಿದ್ಧಿ, ನೀರಿಗೂ ತತ್ವಾರ ಇದ್ದ ವಿಜಯಪುರ ಇಂದು ಹಸರಿನಿಂದ ಕಂಗೊಳಿಸುತ್ತಿದೆ. ಪ್ರವಾಸೋದ್ಯಮ ಅಭಿವೃದ್ಧಿಯೊಂದಿಗೆ ಪರಿವರ್ತನೆಯೆಡೆಗೆ ಸಾಗುತ್ತಿದೆ ಎಂದು ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ ಹೇಳಿದರು.

ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಶನಿವಾರ ನಗರದ ಶಿವಗಿರಿಯಲ್ಲಿ ನಡೆದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮಕ್ಕೆ ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ವಿಶ್ವವಿಖ್ಯಾತ ಗೋಳಗುಮ್ಮಟದೊಂದಿಗೆ ಐತಿಹಾಸಿಕ ತಾಣಗಳುಳ್ಳ ವಿಜಯಪುರ ಬರಗಾಲಕ್ಕೆ ತುತ್ತಾಗಿದ್ದ ಜಿಲ್ಲೆ. ಸಚಿವ ಎಂ.ಬಿ.ಪಾಟೀಲರು ನೀರಾವರಿ ಸಚಿವರಾಗಿದ್ದ ಸಂದರ್ಭದಲ್ಲಿ ಕೈಗೊಂಡ ಹಲವು ನೀರಾವರಿ ಯೋಜನೆ, ಕೋಟಿ ವೃಕ್ಷ ಅಭಿಯಾನ ಸೇರಿದಂತೆ ವಿವಿಧ ಅಭಿವೃದ್ಧಿಕಾರ್ಯಗಳಿಂದ ಇಂದು ಹಸಿರಿನಿಂದ ಕಂಗೊಳಿಸುತ್ತಿದೆ. ಇದರೊಂದಿಗೆ ಪ್ರವಾಸೋದ್ಯಮಕ್ಕೆ ವಿಫುಲ ಅವಕಾಶಗಳಿದ್ದು, ಈ ನಿಟ್ಟಿನಲ್ಲಿ ಇದಕ್ಕೆ ಪೂರಕವಾಗಿ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣವಾಗುತ್ತಿದೆ. ರಸ್ತೆ ಸಂಪರ್ಕವೂ ಇದೆ. ಕುಡಿಯುವ ನೀರಿನ ಸಮಸ್ಯೆ ಇಲ್ಲ. ನಗರದ ಐತಿಹಾಸಿಕ ಭಾವಿ ಸ್ವಚ್ಛಗೊಳಿಸಿ, ಅನ್ಯ ಉದ್ದೇಶಕ್ಕೆ ನೀರು ಬಳಕೆಗೆ ಕ್ರಮ ವಹಿಸಿದ್ದರಿಂದ ಕುಡಿಯುವ ನೀರಿನ ಸಮಸ್ಯೆಯೂ ಕಡಿಮೆಯಾಗಿದೆ. ಜಿಲ್ಲೆಯಲ್ಲಿ ವಿಮಾನಯಾನ ಸೇವೆಯಿಂದ ದೇಶ-ವಿದೇಶದಿಂದ ಹೆಚ್ಚಿನ ಪ್ರವಾಸಿಗರು ಆಗಮಿಸಲು ಅನುಕೂಲವಾಗುತ್ತದೆ. ಇಲ್ಲಿ ಬೆಳೆದಿರುವ ಬೆಳೆಗಳಿಗೂ ಅಂತರರಾಷ್ಟ್ರೀಯ ಮಾರುಕಟ್ಟೆ ಲಭ್ಯವಾಗಲಿದೆ. ಜಿಯೋ ಟ್ಯಾಗ್ ಹೊಂದಿರುವ ಲಿಂಬೆಯೂ ಸೇರಿದಂತೆ ತೋಟಗಾರಿಕಾ ಬೆಳೆಗಳಾದ ದ್ರಾಕ್ಷಿ, ದಾಳಿಂಬೆ ಸೇರಿದಂತೆ ಹಣ್ಣು ಹಂಪಲ ವಿದೇಶಕ್ಕೆ ರಫ್ತು ಮಾಡುವುದರಿಂದ ಆರ್ಥಿಕವಾಗಿ ಸಬಲತೆ ಹೊಂದಲು ಅನುಕೂಲ ಒದಗಿಸಿದೆ ಎಂದು ಅವರು ಹೇಳಿದರು.

ಇಂದಿನ ವಿದ್ಯಾರ್ಥಿಗಳು ಸಾಧನೆ ಮಾಡಬೇಕು. ನಮ್ಮಲ್ಲಿರುವ ಸ್ಮಾರಕಗಳ ಕುರಿತಾಗಿ ತಿಳಿದುಕೊಳ್ಳಬೇಕು. ಪ್ರವಾಸೋದ್ಯಮದಿಂದ ಅನೇಕ ಲಾಭಗಳಿದ್ದು ಉದ್ಯೋಗ ಆರ್ಥಿಕತೆವೃದ್ಧಿಗೆ ಪ್ರವಾಸೋದ್ಯಮ ಬಹುದೊಡ್ಡ ಪಾತ್ರ ವಹಿಸಲಿದ್ದು, ಜಿಲ್ಲೆಯಲ್ಲಿರುವ ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸಲು ಎಲ್ಲರೂ ಕೈಜೋಡಿಸುವ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಅವರು ಹೇಳಿದರು.

ವಿಜಯಪುರ ಉಪ ವಿಭಾಗಾಧಿಕಾರಿ ಗುರುನಾಥ ದಡ್ಡೆ ಅವರು ಮಾತನಾಡಿ, ಪ್ರವಾಸೋದ್ಯಮ ಹಾಗೂ ಸುಸ್ಥಿರ ಪರಿವರ್ತನೆ ಈ ಬಾರಿಯ ಘೋಷವಾಕ್ಯವಾಗಿದೆ. ಪಾರಂಪರಿಕ ತಾಣಗಳ ಅಭಿವೃದ್ಧಿ ಹಾಗೂ ಸಂರಕ್ಷಣೆ ಒತ್ತು ನೀಡುವ ಮೂಲಕ ಅಭಿವೃದ್ಧಿಗೊಳಿಸಿ ಸಂರಕ್ಷಣೆ ಮಾಡಿ ಮುಂದಿನ ಪೀಳಿಗೆಗೆ ನೀಡಬೇಕು. ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ವಿಫುಲ ಅವಕಾಶಗಳಿದ್ದು, ಹೆಚ್ಚೆಚ್ಚು ಪ್ರವಾಸಿಗರನ್ನು ಜಿಲ್ಲೆಗೆ ಆಕರ್ಷಿಸುವ ನಿಟ್ಟಿನಲ್ಲಿ ನಮ್ಮ ಪಾರಂಪರಿಕ ತಾಣಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ಕುರಿತು ಜಾಗೃತಿ ಮೂಡಿಸುವ ಮೂಲಕ ಪ್ರವಾಸೋದ್ಯಮ ಅಭಿವೃದಿಗೆ ಕೊಡುಗೆ ನೀಡೋಣ ಎಂದು ಅವರು ಹೇಳಿದರು.

ಪೀಟರ್ ಅಲೆಕ್ಸಾಂಡರ್ ಅವರು ಉಪನ್ಯಾಸ ನೀಡಿ, ನಮ್ಮ ಪೂರ್ವಜರು ನಮಗೆ ಬಹುದೊಡ್ಡ ಕೊಡುಗೆ ಕೊಟ್ಟಿದ್ದಾರೆ. ಅವರು ನೀಡಿರುವ ಸ್ಮಾರಕಗಳನ್ನು ಸಂರಕ್ಷಣೆ ಮಾಡುವುದು ನಮ್ಮದಾಗಿದೆ. ಜಗತ್ತಿನ ಪ್ರಸಿದ್ಧ ಗೋಳಗುಮ್ಮಟ ನಮ್ಮ ಜಿಲ್ಲೆ ಹೊಂದಿದೆ.ನಮ್ಮ ಜಿಲ್ಲೆ ಜಗತ್ತಿನಲ್ಲಿ ಹೆಸರುವಾಸಿಯಾಗಿದೆ. ಇದರಿಂದ ನಮ್ಮ ಜಿಲ್ಲೆಯ ಕೀರ್ತಿ ವಿಶ್ವಮಟ್ಟದಲ್ಲಿದ್ದು, ಅಂತಹ ವಿಶೇಷತೆಯುಳ್ಳ ನಗರದವರಾದ ನಮಗೂ ಹೆಮ್ಮೆಯೂ ಇದೆ. ಪಾರಂಪರಿಕ ತಾಣಗಳ ರಕ್ಷಣೆಗೆ ನಾವೆಲ್ಲ ಒತ್ತು ನೀಡಿ ಎಲ್ಲರಿಗೂ ತಿಳಿಸೋಣ ಎಂದು ಹೇಳಿದರು. ಪ್ರವಾಸೋದ್ಯಮ ಬೆಳವಣಿಗೆಯಿಂದ ಆರ್ಥಿಕ ಉನ್ನತಿಗೆ ಸಹಕಾರಿಯಾಗಿದೆ. ಯುವಕರು ನಮ್ಮ ಪ್ರವಾಸಿ ತಾಣಗಳ ಕುರಿತು ತಿಳಿದುಕೊಳ್ಳಬೇಕು. ಪ್ರವಾಸಿ ತಾಣಗಳು, ನಮ್ಮ ಸ್ಮಾರಕಗಳು ಮುಕುಟಪ್ರಾಯವಾಗಿವೆ ಎಂದು ಹೇಳಿದರು.

ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಅರವಿಂದ ಹೂಗಾರ ಅವರು ಪ್ರಾಸ್ತಾವಿಕ ಮಾತನಾಡಿ, ವಿಶ್ವ ಪ್ರವಾಸೋದ್ಯಮದ ಅಂಗವಾಗಿ ಜಿಲ್ಲೆಯಲ್ಲಿ ಭಾಷಣ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಬಾರಕಮಾನ್ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮ, ವಿಶೇಷವಾಗಿ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಹೇಳಿದರು.

ಸುಭಾಷ್ಚಂದ್ರ ಕನ್ನೂರ ಅವರು ಕಾರ್ಯಕ್ರಮ ನಿರ್ವಹಿಸಿದರು. ಶಿವಗಿರಿ ಆವರಣದಲ್ಲಿ ಸಸಿ ನೆಡಲಾಯಿತು.

ಕಾರ್ಯಕ್ರಮದ ಅಂಗವಾಗಿ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಪ್ರವಾಸೋದ್ಯಮಕ್ಕಾಗಿ ಸಹಕಾರ ಹಾಗೂ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಲಾಯಿತು. ವಿಶ್ವ ಪ್ರವಾಸೋದ್ಯಮ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯು ಹಮ್ಮಿಕೊಂಡ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಉಪ ಮಹಾಪೌರರಾದ ಸುಮಿತ್ರಾ ಜಾಧವ, ಜಿಲ್ಲಾ ಪಂಚಾಯತಿಯ ಯೋಜನಾ ಮುಖ್ಯ ಯೋಜನಾಧಿಕಾರಿ ಸಿ.ವಿ ಕುಂಬಾರ, ಕೆಕೆಆರ್‌ಟಿಸಿಯ ವಿಭಾಗಾಧಿಕಾರಿ ನಾರಾಯಣಪ್ಪ ಕುರುಬರ, ಎಎಸ್‌ಐ ಅಧಿಕಾರಿ ವಿಜಯಕುಮಾರ, ಕೆಎಸ್‌ಟಿಡಿಸಿಯ ವ್ಯವಸ್ಥಾಪಕಿ ಜಗದೇವಿ, ಡಿಟಿಒ ಹುಗ್ಗೆನ್ನವರ, ಶಿವಗಿರಿಯ ವ್ಯವಸ್ಥಾಪಕಿ ಆರತಿ ಪಾಟೀಲ, ಬಂಗಾರಮ್ಮ ಸಜ್ಜನ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ.ತಮ್ಮಣ್ಣ, ಶಾಂತೇಶ ಕಳಸಗೊಂಡ, ಪ್ರಶಾಂತ ಶೆಟ್ಟಿ, ಅಮೀನಹುಲ್ಲೂರ,ಬಿ.ಟಿ,ಜಾಧವ, ಅಡಿವೆಪ್ಪ ಸಾಲಗಲ್, ಎಸ್.ಬಿ. ಪಾಟೀಲ, ಎಸ್.ಬಿ. ಬಿರಾದಾರ, ಮಹೇಶ ಕ್ಯಾತನವರ ಸೇರಿದಂತೆ ಸಾರ್ವಜನಿಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಆಡು, ಟಗರು ಮರಿ ಕಳ್ಳರ ಬಂಧನ



**ಬಾಗಲಕೋಟೆ :** ನವನಗರ ವ್ಯಾಪ್ತಿಯಲ್ಲಿ ಆಡು ಮತ್ತು ಟಗರು ಮರಿ ಕಳ್ಳತನ ಮಾಡುತ್ತಿದ್ದ ಮೂವರು ಖದೀಮರನ್ನು ನವನಗರ ಪೋಲಿಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ರಂಗಪ್ಪ ಹೊಸಮನಿ, ರಂಗಪ್ಪ ನಕ್ಕರಗುಂದಿ ಹಾಗೂ ಮುತ್ತಪ್ಪ ಬಿಸನಾಳ. ಬಂಧಿತ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನವನಗರದ ಯೂನಿಟ್?2 ಹೊರವಲಯದಲ್ಲಿ ಹಾಕಿದ್ದ ಕುರಿ ದಡ್ಡಿಯಿಂದ ಮೂರು ಆಡುಗಳು, ಐದು ಆಡಿನ ಮರಿಗಳು ಹಾಗೂ ಐದು ಟಗರಿನ ಮರಿಗಳನ್ನು ಕಳವು ಮಾಡಿ ಪರಾರಿಯಾಗಿದ್ದ ಆರೋಪಿಗಳಿಗೆ ಪೊಲೀಸರು ಬೆನ್ನಟ್ಟಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಾರ್ಯಾಚರಣೆಯಲ್ಲಿ ಪೊಲೀಸರು 3 ಆಡುಗಳು, 8 ಆಡಿನ ಮರಿಗಳು, 5 ಟಗರಿನ ಮರಿಗಳನ್ನು ವಶಪಡಿಸಿಕೊಂಡಿದ್ದು, ಜೊತೆಗೆ 2 ಲಕ್ಷ ಮೌಲ್ಯದ ಬುಲೆರೋ ಪಿಕ್ ಅಪ್ ವಾಹನವನ್ನು ಜಪ್ತಿ ಮಾಡಿದ್ದಾರೆ.

ಈ ಕಾರ್ಯಾಚರಣೆ ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ, ಹಾಗೂ ಮಹಾಂತೇಶ ಜಿದ್ದಿ ಅವರ ಮಾರ್ಗದರ್ಶನದಲ್ಲಿ, ಡಿಎಸ್ಪಿ ಗಜಾನನ ಸುತಾರ, ಸಿಪಿಐ ಆರ್.ಎಸ್. ಬಿರಾದಾರ ಅವರ ನೇತೃತ್ವದಲ್ಲಿ ನಡೆಯಿತು.

ಪಿಎಸ್‌ಐ ಶ್ರೀಮತಿ ಎನ್.ಪಿ. ನಿಂಗನೂರ, ಪಿಎಸ್‌ಐ ಕುಮಾರ ಹಿತ್ತಲಮನಿ (ಕಾ & ಸು) ಹಾಗೂ ಸಿಬ್ಬಂದಿಗಳಾದ ಶ್ರೀಶೈಲ ನಡಗೇರಿ, ಮಂಜುನಾಥ ಸಂಗೋಂದಿ, ಕೆ.ಎನ್. ದಂದರಗಿ, ಲಾಲಸಾಬ ನದಾಫ, ವೈ.ಎಚ್. ಭಗವತಿ,

ನಾಸೀರ ಬೀಳಗಿ, ಲಕ್ಷ್ಮಣ ತೆಗ್ಗಿ, ಚಂದ್ರು ಜೆಟ್ಟಪ್ಪಗೋಳ, ಬಸವರಾಜ ಜಗಲಿ ಸೇರಿದಂತೆ ಹಲವರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಪೊಲೀಸರ ತ್ವರಿತ ಹಾಗೂ ಶಿಸ್ತುಬದ್ಧ ಕಾರ್ಯಾಚರಣೆಯನ್ನು ಎಸ್ಪಿ ಸಿದ್ದಾರ್ಥ ಗೋಯಲ್ ಶ್ಲಾಘಿಸಿದ್ದಾರೆ.

# ನಿಗಮ ಮಂಡಳಿಯಲ್ಲಿ ನೇಕಾರ ಸಮುದಾಯಕ್ಕೆ ಸ್ಥಾನ ನೀಡಲು ಆಗ್ರಹ



**ಕಮತಗಿ :** ರಾಜ್ಯ ಸರ್ಕಾರ ಇತ್ತೀಚೆಗೆ ಪ್ರಕಟಿಸಿರುವ ನಿಗಮ?ಮಂಡಳಿ ಅಧ್ಯಕ್ಷರ ಪಟ್ಟಿಯಲ್ಲಿ ನೇಕಾರ ಸಮುದಾಯದ ಮುಖಂಡರಿಗೆ ಸ್ಥಾನ ಸಿಗದೆ ಹೋಗಿರುವುದಕ್ಕೆ ಸಮುದಾಯದ ಹಿರಿಯರು ಹಾಗೂ ಯುವಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರು ಸಚಿವರ ಗಮನ ಸೆಳೆಯುವ ಮೂಲಕ ತಕ್ಷಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.ರಾಜ್ಯದ ಹಿರಿಯ ನೇಕಾರ ಮುಖಂಡ ಎಚ್.ಕೆ. ಗೋವಿಂದಪ್ಪ ಹಾಗೂ ಯುವ ಮುಖಂಡ ವಿಜಯಕುಮಾರ ಭಾಪ್ರಿ, ಬೆಂಗಳೂರಿನಲ್ಲಿ ಮುಜರಾಯಿ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರನ್ನು ಭೇಟಿಮಾಡಿ, "ಕಾಂಗ್ರೆಸ್ ಪಕ್ಷದಲ್ಲಿ ದೀರ್ಘಕಾಲದಿಂದ ಶ್ರಮಿಸುತ್ತಿರುವ ನೇಕಾರ ಮುಖಂಡರಿಗೆ ಇನ್ನೂ ಸರಿಯಾದ ಮಾನ್ಯತೆ ದೊರೆಯುತ್ತಿಲ್ಲ. ನಿಗಮ?ಮಂಡಳಿಗಳ ಪಟ್ಟಿಯಲ್ಲಿಯೂ ಸಮುದಾಯಕ್ಕೆ ಅವಕಾಶ ನೀಡದಿರುವುದು ಅನ್ಯಾಯ" ಎಂದು ಅಸಮಾಧಾನ ವ್ಯಕ್ತಪಡಿಸಿದರು.ರಾಜ್ಯದಲ್ಲಿ ನೇರವಾಗಿ ನೇಕಾರರ ವೃತ್ತಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜ್ಯ ಜವಳಿ ಮೂಲಾಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಎಂಬ ಎರಡು ಪ್ರಮುಖ ಸಂಸ್ಥೆಗಳಿವೆ. ಈ ಸಂಸ್ಥೆಗಳ ಮೂಲಕವೇ ಸಮುದಾಯದ ಕಲ್ಯಾಣ ಯೋಜನೆಗಳು ಜಾರಿಯಾಗುತ್ತವೆ. ಆದರೆ ಇತ್ತೀಚಿನ ನೇಮಕಾತಿಯಲ್ಲಿ ನೇಕಾರ ಸಮುದಾಯಕ್ಕೆ ಪ್ರತಿನಿಧಿತ್ವ ಸಿಗದೆ ಹೋಗಿರುವುದು ತೀವ್ರ ವಿರೋಧಕ್ಕೆ ಕಾರಣವಾಗಿದೆ.

ಇದೇ ವೇಳೆ, ಭದ್ರಾವತಿಯ ಚೇತನಗೌಡ ಅವರನ್ನು ಜವಳಿ ಮೂಲಾಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಉಲ್ಲೇಖಿಸಿ, "ಇಲ್ಲಿಯೂ ನೇಕಾರ ಸಮುದಾಯವನ್ನು ಕಡೆಗಣಿಸಲಾಗಿದೆ" ಎಂದು ಇಬ್ಬರೂ ಮುಖಂಡರು ವಿಷಾದ ವ್ಯಕ್ತಪಡಿಸಿದರು.ಈ ಮನವಿಯನ್ನು ಆಲಿಸಿದ ಸಚಿವ ರಾಮಲಿಂಗಾರೆಡ್ಡಿ, "ನೇಕಾರ ಸಮುದಾಯದ ತೊಂದರೆಗಳು ಹಾಗೂ ಹಕ್ಕುಗಳನ್ನು ನಾವು ಅರಿತುಕೊಂಡಿದ್ದೇವೆ. ನಿಗಮ?ಮಂಡಳಿಗಳಲ್ಲಿ ಸಮುದಾಯಕ್ಕೆ ಅವಕಾಶ ಒದಗಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಗಮನ ಸೆಳೆಯುತ್ತೇವೆ" ಎಂದು ಭರವಸೆ ನೀಡಿದರು.

# ಏಷ್ಯಾ ಕಪ್ ಫೈನಲ್ ಪಂದ್ಯಕ್ಕೆ ನಗರದಲ್ಲಿ ವಿಶೇಷ ಪೂಜೆ



**ಬಾಗಲಕೋಟೆ :** ಏಷ್ಯಾ ಕಪ್ ಕ್ರಿಕೆಟ್ ಫೈನಲ್ ಪಂದ್ಯದ ಕೌಂಟ್ಡೌನ್ ಆರಂಭವಾಗುತ್ತಿದ್ದಂತೆ ಬಾಗಲಕೋಟ ನಗರದಲ್ಲೂ ಕ್ರಿಕೆಟ್ ಹುಮ್ಮಸ್ಸು ಹೆಚ್ಚಾಗಿದೆ. ಬದ್ಧ ವೈರಿಗಳೆಂದು ಪರಿಗಣಿಸಲ್ಪಡುವ ಭಾರತ-ಪಾಕಿಸ್ತಾನದ ನಡುವೆ ನಡೆಯಲಿರುವ ಕಾದಾಟಕ್ಕೆ ದೇಶವ್ಯಾಪಿ ನಿರೀಕ್ಷೆ ಏರಿದ್ದು,ನಗರದ ಅಂಬಾ ಭವಾನಿ ದೇವಸ್ಥಾನದಲ್ಲಿ ಮಹಿಳೆಯರು ತಂಡ ಇಂಡಿಯಾದ ಜಯಕ್ಕಾಗಿ ವಿಶೇಷ ಪೂಜೆ ಸಲ್ಲಿಸಿದರು. ಪೂಜೆ ಬಳಿಕ ದೇವಸ್ಥಾನದ ಆವರಣವೇ ದೇಶಭಕ್ತಿಯ ಘೋಷಣೆಯಿಂದ ಹರ್ಷೋದ್ಗಾರಗೊಂಡಿತು. ಮಹಿಳೆಯರು "ಗೆದ್ದು ಬಾ ಭಾರತ, ಭಾರತ್ ಮಾತಾಕಿ ಜೈ" ಎಂದು ಘೋಷಣೆ ಮಾಡುತ್ತಾ, ತಂಡ ಇಂಡಿಯಾದ ಗೆಲುವಿಗಾಗಿ ಹಾರೈಸಿದರು. ನಗರದ ಅಂಬಾಭವಾನಿ ದೇವಸ್ಥಾನದಲ್ಲಿ ನಡೆದ ಈ ಧಾರ್ಮಿಕ ಕಾರ್ಯಕ್ರಮವು ಜನರಲ್ಲಿ ಕ್ರಿಕೆಟ್ ಪಂದ್ಯಕ್ಕಾಗಿ ಉತ್ಸಾಹ ಹೆಚ್ಚಿಸಿತು. ಮಹಿಳೆಯರು ನಾರಿಯ ಶಕ್ತಿ, ಭಕ್ತಿಯ ಶಕ್ತಿ ಹಾಗೂ ದೇಶಪ್ರೇಮದ ಉತ್ಸಾಹವನ್ನು ಒಟ್ಟುಗೂಡಿಸಿ ತಂಡ ಇಂಡಿಯಾದ ಗೆಲುವಿಗಾಗಿ ದೇವಿಯನ್ನು ಪ್ರಾರ್ಥಿಸಿದರು. ಕ್ರಿಕೆಟ್ ಇತಿಹಾಸದಲ್ಲಿ 41 ವರ್ಷದ ಬಳಿಕ ಭಾರತ-ಪಾಕಿಸ್ತಾನ ಏಷ್ಯಾ ಕಪ್ ಫೈನಲ್ನಲ್ಲಿ ಮುಖಾಮುಖಿಯಾಗುತ್ತಿರುವ ಹಿನ್ನೆಲೆಯಲ್ಲಿ ಬಾಗಲಕೋಟೆಯ ಜನರಲ್ಲಿ ತೀವ್ರ ನಿರೀಕ್ಷೆ ಮೂಡಿದೆ. ನಗರದಲ್ಲಿ ಹಲವೆಡೆ ಅಭಿಮಾನಿಗಳು ತಂಡ ಇಂಡಿಯಾ ಪರ ಹಾರೈಕೆಗಳನ್ನು ವ್ಯಕ್ತಪಡಿಸುತ್ತಿದ್ದು, ದೇವಸ್ಥಾನದಲ್ಲಿ ನಡೆದ ಈ ವಿಶೇಷ ಪೂಜೆಯು ಕ್ರೀಡಾ ಅಭಿಮಾನಿಗಳಲ್ಲಿ ಆತ್ಮವಿಶ್ವಾಸ ಮೂಡಿಸಿದೆ.

# ಜಾತಿ ಸಮೀಕ್ಷೆಯ ಧರ್ಮ ಕಾಲಂನಲ್ಲಿ ಹಿಂದು ಜಾತಿ ಕಾಲಂನಲ್ಲಿ ಮಾಳಿ ಎಂದೇ ಬರೆಯಿಸಿ



**ಬೆಳಗಾವಿ :** ರಾಜ್ಯ ಸರ್ಕಾರದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಹಾಗೂ ಕೇಂದ್ರ ಸರ್ಕಾರದ ಜನಗಣತಿಯು ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 7 ರ ವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಪ್ರಾರಂಭವಾಗಿದೆ. ರಾಜ್ಯದ 31 ಜಿಲ್ಲೆಗಳಲ್ಲಿ ಮಾಳಿ,ಮಾಲಗಾರ ಸಮಾಜ ಬಾಂಧವರೆಲ್ಲರೂ ಗೊಂದಲ ಮಾಡಿಕೊಳ್ಳದೆ ಧರ್ಮದ ಕಾಲಂನಲ್ಲಿ ಹಿಂದೂ ಅಂಥ ನಮೂದಿಸಿ, ಜಾತಿಯ ಕಾಲಂನಲ್ಲಿ ಮಾಳಿ .ಅಂತ ನಮೂದಿಸಬೇಕೆಂದು ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕೃತ, ಸಮಾಜ ಸೇವಕ,ಪತ್ರಕರ್ತ ಮುರಿಗೆಪ್ಪ ಮಾಲಗಾರ ಅವರು ತಿಳಿಸಿದ್ದಾರೆ.

ಹಳ್ಳೂರ ಗ್ರಾಮದಲ್ಲಿ ಸಭೆ ನಡೆಸಿ ಮಾತನಾಡಿ ಸಮೀಕ್ಷೆದಾರರು ಮನೆಗೆ ಬಂದ ಸಮಯದಲ್ಲಿ ಓಟಿಪಿ ಇರುವ ಆಧಾರ್ ಕಾರ್ಡ್ ರೇಷನ್ ಕಾರ್ಡ್ ತೋರಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸರಕಾರದ ಮಾಲಿ,/ಮಾಳಿ , ಅಂತ ನಮೂದಿಸಿದರೆ 2 ಎ ಮೀಸಲಾತಿಯಲ್ಲಿ ಬರುತ್ತದೆ. ಮಾಳಿ, ಮಾಲಗಾರ ಬರೆಯಿಸುವುದರಿಂದ ಸಮಾಜದ ಜನಸಂಖ್ಯೆ 2 ಬಾಗವಾಗಿ ಕಡಿಮೆ ಸಂಖ್ಯೆ ತೋರಿಸುತ್ತದೆ.ಅದಕ್ಕಾಗಿ ಹಿಂದೂ ಮಾಳಿ ಒಂದೇ ಬರೇಯಿಸಿ ಎಂದು ಸಮಾಜದ ಮುಖಂಡರು ನಿರ್ಣಯಿಸಿದ್ದಾರೆ.ಲಿಂಗಾಯತ ಮಾಳಿ, ನಮೂದಿಸಿದರೆ 3 ಬಿ ಗೆ ಸೇರುತ್ತದೆ. ಕಡ್ಡಾಯವಾಗಿ ಮಾಳಿ/ ಅಂತ ಬರೆಯಿಸಿರಿ

ಈ ಸಮೀಕ್ಷೆ ಸಾಮಾಜಿಕ ಶೈಕ್ಷಣಿಕ ಉದ್ದೇಶಕ್ಕಾಗಿ ಸಮಾಜದ ನೈಜ ಸಂಖ್ಯೆ ತಿಳಿಯಲು ಇದೊಂದು ಸುವರ್ಣಾವಕಾಶ ಸರಕಾರದ ಸೌಲಭ್ಯ ಪಡೆದುಕೊಳ್ಳುವ ನಮ್ಮ ಹಕ್ಕಿಗಾಗಿ ಜಾತಿ ಸಮೀಕ್ಷೆ ಕಾರ್ಯವಿದು ಆದ್ದರಿಂದ ಸಮಾಜ ಬಾಂದವರು ಸದುಪಯೋಗ ಪಡಿಸಿಕೊಳ್ಳಬೇಕು ನಮ್ಮ ಸಮಾಜಕ್ಕೆ ಅನ್ಯಾಯವಾಗದಂತೆ ಸಮಾಜದ ಸ್ಥಿತಿ-ಗತಿ ಮತ್ತು ನಿಖರ ಸಂಖ್ಯೆ ತಿಳಿಯುವ ಉದ್ದೇಶ ಇದಾಗಿದೆ.ರಾಜ್ಯದಲ್ಲಿ ವಿವಿಧ ನಾಮಾಂಕಿತವಾದ ಮಾಳಿ, ಮಾಲಗಾರ, ತೋಟಗೇರ, ತಿಗಳ ಇನ್ನೂ ಆನೇಕ ಹೆಸರುಗಳಿಂದ ಕರೆಯಲ್ಪಡುತ್ತಾರೆ ಕರ್ನಾಟಕದಲ್ಲಿ ಮಾಳಿ, ಮಾಲಗಾರ ಸಮಾಜದವರು ಒಗ್ಗಟ್ಟು ತೋರಿಸಬೇಕಾಗಿದೆ. ಇದರಲ್ಲಿ ಮಕ್ಕಳ ಭವಿಷ್ಯವೂ ಅಡಗಿದೆ ಹಿಂದೆ ಸರಕಾರವು ಸಮೀಕ್ಷೆ ನಡೆಸಿ ಕೇವಲ 83296 ಸಾವಿರ ಜನಸಂಖ್ಯೆ ತೋರಿಸಿದ್ದಾರೆ. ರಾಜ್ಯದಲ್ಲಿ ಸುಮಾರು 25 ಲಕ್ಷದಿಂದ 30 ಲಕ್ಷ ಜನಸಂಖ್ಯೆಯಿದೆ ಎಂದು ತಿಳಿದು ಬಂದಿದೆ ಉಳಿದವರು ಎಲ್ಲಿ ಹೋದರೆಂದು ಗೊಂದಲವಿದೆ ಇನ್ನಾದರೂ ಸಮಾಜ ಬಾಂದವರು ಎಚ್ಚೆತ್ತುಕೊಳ್ಳಬೇಕಾಗಿದೆ 900 ವರ್ಷಗಳ ಹಿಂದಿನಿಂದಲೂ ಸಮಾಜವು ನಲುಗಿ ಹೋಗಿದೆ. ಈಗ ಬಂದಿರುವ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಸಮಾಜದ ಒಮ್ಮತದ ನಿರ್ಧಾರವಾಗಿದೆ.

ಈ ಸಮಯದಲ್ಲಿ ಮುಖಂಡರಾದ,ನಿಂಗಪ್ಪ ಸುಣದೋಳಿ .ಶಿವಪ್ಪ ನಿಡೋಣಿ.ದುಂಡಪ್ಪಾ ಹೊಸಟ್ಟಿ.ಯಮನಪ್ಪ ನಿಡೋಣಿ.ಭೀಮಪ್ಪಹೊಸಟ್ಟಿ.ಸಿದ್ದಪ್ಪಕೂಲಿಗೋಡ.ಬಸಪ್ಪ ಗರಗ. ರಾಯಪ್ಪ ಕೂಲಿಗೋಡ .ಬಸಪ್ಪ ನೀಡೋಣಿ. ಹನಮಂತ ಮಾಲಗಾರ. ಯಲ್ಲಪ್ಪ ಕೂಲಿಗೋಡ.ಲಕ್ಷ್ಮಣ ಹೊಸಟ್ಟಿ.ಹನಮಂತ ಸುಣದೋಳಿ.ಬಸಪ್ಪ ನಿಡೋಣಿ.ಲಕ್ಷಣ ಕೂಲಿಗೋಡ.ಭೀಮಪ್ಪ ಗೋಸಬಾಳ. ದುಂಡಪ್ಪ ಕುಳ್ಳೋಳ್ಳಿ.ಸಂತೋಷ ಮಾಲಗಾರ.ರಾಮಪ್ಪ ಕೂಲಿಗೋಡ.ಶಿವಲಿಂಗ ಹೊಸಟ್ಟಿ ಸೇರಿದಂತೆ ಅನೇಕರಿದ್ದರು.

# ಭೀಮಾನದಿ ಪ್ರವಾಹ ಪೀಡಿತ ಗ್ರಾಮಗಳಿಗೆ ಶಾಸಕ, ಡಿಸಿ ಭೇಟಿ, ಪರಿಶೀಲನೆ: ಸಂತ್ರಸ್ಥರ ಸಮಸ್ಯೆ ಆಲಿಕೆ

**ವಿಜಯಪುರ :** ಭೀಮಾನದಿ ಪ್ರವಾಹಕ್ಕೆ ಒಳಗಾಗಿರುವ ಸಿಂದಗಿ ಮತಕ್ಷೇತ್ರದ ವಿವಿಧ ಗ್ರಾಮಗಳಿಗೆ ಕ್ಷೇತ್ರದ ಶಾಸಕ ಅಶೋಕ ಮನಗೂಳಿ, ವಿಜಯಪುರ ಜಿಲ್ಲಾಧಿಕಾರಿ ಡಾ. ಆನಂದ ಕೆ. ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿ, ಸಂತ್ರಸ್ಥರ ಸಮಸ್ಯೆಗಳನ್ನು ಆಲಿಸಿದರು.

ಶನಿವಾರ ಭೀಮಾನದಿ ಪ್ರವಾಹ ಪೀಡಿತ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಅವರು, ಪ್ರವಾಹಕ್ಕೊಳಗಾಗಿರುವ ಪ್ರದೇಶಗಳಲ್ಲಿ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದ ಶಾಸಕರು, ಈ ಕಾರ್ಯವನ್ನು ಪ್ರಥಮಾದ್ಯತೆ ಮೇಲೆ ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿ ಪರಿಹಾರ ಕಾರ್ಯ ಕೈಗೊಳ್ಳುವಂತೆ ಅವರು ತಿಳಿಸಿದರು. ಈ ಸಂದರ್ಭದಲ್ಲಿ ವಿವಿಧ ಸಂತ್ರಸ್ಥರ ಸಮಸ್ಯೆಗಳನ್ನು ಆಲಿಸಿ, ಪರಿಹಾರಕ್ಕೆ ಭರವಸೆ ನೀಡಿದರು.

ತಾಲೂಕಿನ ದೇವರನಾವದಗಿ ಗ್ರಾಮ ಪಂಚಾಯತಿಯ ಕುಮಸಗಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಮತ್ತು ಶ್ರೀ ಕಲ್ಲಾಲಿಂಗೇಶ್ವರ ಪ್ರಾಥಮಿಕ ಶಾಲೆಯಲ್ಲಿ ಹಾಗೂ ದೇವಣಗಾವ ಪ್ರಾಥಮಿಕ ಶಾಲೆಯಲ್ಲಿ ತೆರೆಯಲಾದ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ, ಕಾಳಜಿ ಕೇಂದ್ರಗಳಲ್ಲಿ ಕಲ್ಪಿಸಿರುವ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದರು. ಅಲ್ಲಿನ ಸಂತ್ರಸ್ಥರೊಂದಿಗೆ



ಮಾತನಾಡಿ, ಕಾಳಜಿ ಕೇಂದ್ರಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ.ಯಾರು ಸಹ ಭಯ ಪಡುವ ಅವಶ್ಯಕತೆ ಇಲ್ಲ. ಜಿಲ್ಲಾಡಳಿತ ನಿಮ್ಮ ಜೊತೆಗಿದ್ದು, ಅಗತ್ಯ ಸಹಕಾರ ಒದಗಿಸುವಂತೆ ಕೋರಿ, ಸಂತ್ರಸ್ಥರಿಗೆ ಧೈರ್ಯ ತುಂಬಿದ ಜಿಲ್ಲಾಧಿಕಾರಿಗಳು, ಪ್ರವಾಹ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಜಿಲ್ಲಾಡಳಿತ ಸನ್ನದ್ಧವಾಗಿದ್ದು, ಯಾವುದೇಜನಮತ್ತುಜಾನುವಾರಗಳಪ್ರಾಣ ಹಾನಿಯಾಗದಂತೆ ಎಲ್ಲಾ ರೀತಿಯ ಸಕಲ ಸುರಕ್ಷತಾ ಕ್ರಮಗಳನ್ನು ಜಿಲ್ಲಾಡಳಿತದಿಂದ ಕೈಗೊಳ್ಳಲಾಗಿದೆ. ಈವರೆಗೆ ಜಿಲ್ಲೆಯ ಆಲಮೇಲ ತಾಲೂಕಿನಲ್ಲಿ 09, ಇಂಡಿ ತಾಲೂಕಿನಲ್ಲಿ 07 ಸೇರಿದಂತೆ ಒಟ್ಟು 16 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದ್ದು, ಈ ಕಾಳಜಿ ಕೇಂದ್ರಗಳಲ್ಲಿ 867 ಜನರಿಗೆ ಆಶ್ರಯ ಒದಗಿಸಲಾಗಿದೆ. ಆಯಾ ಕಾಳಜಿ ಕೇಂದ್ರಗಳಿಗೆ ಓರ್ವ ನೊಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಪ್ರವಾಹ ಪರಿಸ್ಥಿತಿಯನ್ನು ಎಲ್ಲರೂ ಒಟ್ಟಾಗಿ ಸಮರ್ಥವಾಗಿ ಎದುರಿಸಲು, ಅಧಿಕಾರಿಗಳು ಸಹ ಜವಾಬ್ದಾರಿಯುತವಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಅವರು ಸೂಚನೆ ನೀಡಿದರು.

ಸುಮಾರು 53 ವರ್ಷದ ಹಳೆಯದಾದ ದೇವಣಗಾವ ಬ್ರಿಡ್ಜಗೆ ಭೇಟಿ ನೀಡಿ, ಈ ಬ್ರಿಡ್ಜ್ ಹಳೆಯದಾಗಿರುವದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ದುರಸ್ತಿಗೆ ಸಾರ್ವಜನಿಕರು ಒತ್ತಾಯಿಸಿದ ಹಿನ್ನಲೆಯಲ್ಲಿ ಶೀಘ್ರವೇ ದುರಸ್ತಿ ಕಾರ್ಯ ಕೈಗೊಳ್ಳುವುದಾಗಿ ಶಾಸಕರು ಭರವಸೆ ನೀಡಿದರು.

ನಿರಂತರವಾಗಿ ಸುರಿದ ಮಳೆಯಿಂದಾಗಿ ಅನೇಕ ಮನೆ ಮತ್ತು ಬೆಳೆಹಾನಿ ಸಂಭವಿಸಿರುವ ಕುರಿತು ಸಾರ್ವಜನಿಕರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಾಗ, ಕೂಡಲೇ ಬೆಳೆ ಸಮೀಕ್ಷೆ ಕಾರ್ಯ ಕೈಗೊಂಡು ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಈ ಸಂದರ್ಭದಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಇಂಡಿ ಉಪವಿಬಾಗಾಧಿಕಾರಿ ಅನುರಾಧಾ ವಸ್ತ್ರದ, ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಾಮು ಅಗ್ನಿ, ಕರೆಪ್ಪ ಬೆಳ್ಳಿ ಸೇರಿದಂತೆ ತಾಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಅಭಿವೃದ್ಧಿ ಅಧಿಕಾರಿಗಳು, ಸಂತ್ರಸ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

**ಸೊನ್ನ ಬ್ಯಾರೇಜಿಗೆ ಭೇಟಿ ಪರಿಶೀಲನೆ :**
ಸೊನ್ನ ಬ್ಯಾರೇಜಿಗೆ ಭೇಟಿ ನೀಡಿ ನೀರಿನ ಪ್ರವಾಹ ಪರಿಸ್ಥಿತಿ ಮಾಹಿತಿ ಪಡೆದುಕೊಂಡರು ಜಿಲ್ಲಾಡಳಿತದೊಂದಿಗೆ ಸತತ ಸಂಪರ್ಕದಲ್ಲಿದ್ದು ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಡಾ.ಆನಂದ ಕೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಜಂಟಿ ಕೃಷಿ ನಿರ್ದೇಶಕ ಶಿವನಗೌಡ ಪಾಟೀಲ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕನ್ನಡ ಭಾಷೆಗೆ ಗಟ್ಟಿ ಇತಿಹಾಸವಿದೆ: ನಾಡೋಜ ಡಾ. ಮಹೇಶ ಜೋಶಿ



**ವಿಜಯಪುರ :** ಕನ್ನಡ ಭಾಷೆಗೆ ಅತ್ಯಂತ ಗಟ್ಟಿಯಾದ ಇತಿಹಾಸವಿದ್ದು, ಕನ್ನಡದ ಈ ಪವಿತ್ರ ಮಣ್ಣಿನಲ್ಲಿ ಜನಿಸಿದ ನಾವು ನೀವೆಲ್ಲರೂ ನಿಜಕ್ಕೂ ಧನ್ಯರು ಎಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ಅಭಿಪ್ರಾಯಪಟ್ಟರು.

ಶನಿವಾರಕೇಂದ್ರಕನ್ನಡಸಾಹಿತ್ಯಪರಿಷತ್ತು,ಬೆಂಗಳೂರು ಹಾಗೂ ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಕೃಷಿ ಸಂಘ ಕೃಷಿ ಮಹಾವಿದ್ಯಾಲಯ ವಿಜಯಪುರ ಇವರ ಸಹಯೋಗದಲ್ಲಿ ನಗರದಲ್ಲಿ ಜರುಗಿದ ದಾಸ ಸಾಹಿತ್ಯದ ಚಿಂತನಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ವಚನ ಸಾಹಿತ್ಯದ ನಂತರದಲ್ಲಿ ಇಡೀ ಕನ್ನಡ ನಾಡಿಗೆ ಕೀರ್ತನೆಗಳ ಮೂಲಕ ಕನ್ನಡ ನಾಡು ನುಡಿಯನ್ನು ಬೆಳಗಿ ಹೋದ ದಾಸವರೇಣ್ಯರು ನೀಡಿದ ಸಂದೇಶಗಳು ಇಂದು ನಮಗೆಲ್ಲ ದಾರಿದೀಪವಾಗಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃಷಿ ಮಹಾವಿದ್ಯಾಲಯದ ವಿದ್ಯಾಧಿಕಾರಿ ಅಶೋಕ ಸಜ್ಜನ ಅವರು ಮಾತನಾಡಿ, “ದಾಸ ಸಾಹಿತ್ಯ ಬೆಳೆದು ಬಂದ ದಾರಿ” ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಮುತ್ತಗಿಯ ಶ್ರೀ ರಾಮ ನರಸಿಂಹ ಗುರುಕುಲದ ಸಂಸ್ಕೃತ ಪಂಡಿತ ನರಹರಿ ಆಚಾರ್ಯ ಶ್ರೀನಿವಾಸಾಚಾರ್ಯ ಜೋಶಿ ಉಪನ್ಯಾಸ ನೀಡುತ್ತ ಮಾತನಾಡಿ, ದಾಸರಾಗಬೇಕಾದರೆ ಸದಾ ಭಗವಂತನ ಸ್ಮರಣೆ ಮಾಡಿ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವಂತೆ ಮಾಡುವ ಜಗತ್ತಿನ ಶ್ರೇಷ್ಠ ಸಾಹಿತ್ಯ ದಾಸ ಸಾಹಿತ್ಯ.ಕೀರ್ತನೆ, ಉಗಾಭೋಗ, ಸುಳಾದಿಗಳ ಮೂಲಕ ಜಗತ್ತಿಗೆ ಸಂದೇಶ ನೀಡಿದ ದಾಸವರೇಣ್ಯರ ಕೀರ್ತನೆಗಳು ವಿಶ್ವ ಸಾಹಿತ್ಯಕ್ಕೆ ನೀಡಿದ ಶ್ರೇಷ್ಠ ಕೊಡುಗೆ ಎಂದರು.

“ದಾಸ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ” ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಬನಹಟ್ಟಿಯ ವಿಶ್ರಾಂತ ಪ್ರಾಚಾರ್ಯ ಎಸ್.ಎಂ. ಶೇಖ ಮಾತನಾಡಿ, ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಕನ್ನಡ ಸಾಹಿತ್ಯದ ಎರಡು ಕಣ್ಣುಗಳಿದ್ದಂತೆ. ದಾಸರ ಕೀರ್ತನೆಗಳ ಮೂಲಕ ಸಾಮಾಜಿಕ ಸಾಮರಸ್ಯ, ಭಕ್ತಿ ಭಾವದ ಬೀಜ ಬಿತ್ತುವ ಮೂಲಕ ನಮ್ಮಲ್ಲಿಯ ಅಜ್ಞಾನವನ್ನು ಕಿತ್ತೊಗೆಯುವಲ್ಲಿ ದಾಸ ಸಾಹಿತ್ಯದ ಕೊಡುಗೆ ಅಪಾರ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ಎಂ.ಪಟೇಲ ಪಾಂಡು, ಕಸಾಪ ಕಾರ್ಯಕಾರಿಣಿ ಪ್ರತಿನಿಧಿ ಜಿ. ಕೆ. ತಳವಾರ, ಬಾಗಲಕೋಟೆ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಕಲಬುರ್ಗಿ ಕಸಾಪ ಅಧ್ಯಕ್ಷ ತೇಗಲತಿಪ್ಪಿ , ವಿಜಯಪುರ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಮಾತನಾಡಿದರು.

ಕಸಾಪ ಗೌರವ ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ ಸ್ವಾಗತಿಸಿ ಗೌರವಿಸಿದರು. ಗೌರವ ಕಾರ್ಯದರ್ಶಿ ಡಾ. ಮಾಧವ ಗುಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಲ್ಪಾ ಭಸ್ಮೆ ನಿರೂಪಿಸಿದರು. ಜಗದೀಶ ಬೋಳಸೂರ ವಂದಿಸಿದರು.

ಕಾರ್ಯಕ್ರಮದಲ್ಲಿ ಜಿ.ಎಸ್. ಬಳ್ಳೂರ, ರಾಜಕುಮಾರ ಜೊಲ್ಲೆ, ಸಿದ್ರಾಮಯ್ಯ ಲಕ್ಕುಂಡಿಮಠ, ಮಹ್ಬದಗೌಸ ಹವಾಲ್ದಾರ, ಸುರೇಶ ಚಾವಲರ, ಸಂಗಮೇಶ ಜಂಗಮಶೆಟ್ಟಿ, ಸಿದ್ಧರಾಮ ಬಿರಾದಾರ, ಮಹಮ್ಮದ ವಾಲೀಕಾರ, ಕೃಷಿ ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿ ವರ್ಗ ಮತ್ತು ಕೃಷಿ ಮಹಾವಿದ್ಯಾಲಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ರಷ್ಯಾ ನೆಲದಲ್ಲಿ ‘ಶಿಫಾ’ ವಿಶ್ವಶಾಂತಿ ಸಂದೇಶ

**ವಿಜಯಪುರ :** ರಷ್ಯಾ ರಾಜಧಾನಿ ಮಾಸ್ಕೋದಲ್ಲಿ ಎಂಟು ದಿನಗಳ ಕಾಲ ನಡೆದ ವಿಶ್ವ ಯುವ ಶೃಂಗ ಸಭೆಯಲ್ಲಿ ಭಾರತ ದೇಶದಿಂದ ಏಕೈಕ ಯುವ ಪ್ರತಿನಿಧಿಯಾಗಿ ಭಾಗವಹಿಸಿದ ಕುಮಾರಿ ಶಿಫಾ ಜಮಾದಾರ ವಿಶ್ವಶಾಂತಿಯ ಅಗತ್ಯತೆ, ಶಾಂತಿ ಸಂದೇಶ ಸಾರುವಲ್ಲಿ ಭಾರತದ ಪಾತ್ರ ಕುರಿತು ಮನಮುಟ್ಟುವಂತೆ ಮಾತನಾಡುವ ಮೂಲಕ ರಷ್ಯಾದಲ್ಲಿ ಶಾಂತಿ ಮಂತ್ರದ ಸಂದೇಶ ಸಾರಿದ್ದಾರೆ.

ರಷ್ಯಾ ಅಧ್ಯಕ್ಷ ವಾಡ್ಲಿಮೀರ್ ಪುಟೀನ್, ರಾಷ್ಟ್ರಪತಿ ಮಯನ್ಮಾರ್, ಪ್ರಧಾನಿ ಅರ್ಮೇನಿಯಾ, ಇತೋಫಿಯಾ ಪ್ರಧಾನ ಮಂತ್ರಿ, ಬೇಲಾರೂಸ್ ಪ್ರಧಾನಿ ಸೇರಿದಂತೆ ಅನೇಕ ರಾಷ್ಟ್ರಗಳ ಪ್ರಧಾನಮಂತ್ರಿಗಳು, ರಾಷ್ಟ್ರಾಧ್ಯಕ್ಷರು, ಉಜ್ಬೇಕಿಸ್ತಾನ್, ಅರಬ್ ಗಣರಾಜ್ಯ, ಇರಾನ್, ಈಜಿಪ್ತ ಹಾಗೂ ನೈಜೀರೀಯಾ ಸೇರಿದಂತೆ ವಿವಿಧ ದೇಶಗಳ ವಿದೇಶಾಂಗ ಸಚಿವರು, ರಾಯಭಾರಿಗಳು ಭಾಗವಹಿಸಿದ್ದ ಈ ಸಭೆಯಲ್ಲಿ ಶಿಫಾ ಸಮರ್ಥವಾಗಿ ವಿಶ್ವ ಶಾಂತಿ ಕುರಿತಾದ ತಮ್ಮ ವಿಚಾರಗಳನ್ನು ಪ್ರಸ್ತುತಪಡಿಸಿ ವಿಶ್ವ ಶಾಂತಿಯ ಅಗತ್ಯತೆ ಕುರಿತು ಮನವರಿಕೆ ಮಾಡಿಕೊಟ್ಟರು.



ಭಾರತೀಯ ಸಂಸ್ಕೃತಿ, ಸಹೋದರತೆಯ ಪ್ರತಿಬಿಂಬವಾಗಿರುವ ‘ವಸುಧೈವ ಕುಟುಂಬಕಂ’ (ಇಡೀ ಜಗತ್ತೇ ಒಂದು ಕುಟುಂಬ) ಎಂಬ ನೆಲೆಗಟ್ಟು ಆಧರಿಸಿ ಸಮರ್ಥವಾಗಿ ತಮ್ಮ ವಿಚಾರಗಳನ್ನು ಮಂಡಿಸಿ ಇಡಿ ವಿಶ್ವದ ಯುವ ನಾಯಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ವಿಶ್ವ ಅಣು ದಿನಾಚರಣೆ ಅಂಗವಾಗಿ ರಷ್ಯಾ ಸರ್ಕಾರ ತನ್ನ ರಾಜಧಾನಿಯಲ್ಲಿ ಆಯೋಜಿಸಿದ್ದ ವಿಶ್ವ ಯುವ ಶೃಂಗ ಸಭೆಯಲ್ಲಿಇಂಗ್ಲೆಂಡ್,ಅಮೇರಿಕೆ,ಜರ್ಮನಿ, ಫ್ರಾನ್ಸ್ ಸೇರಿದಂತೆ ವಿವಿಧ ದೇಶಗಳಿಂದ ಸರಿಸುಮಾರು 160 ಕ್ಕೂ ಅಧಿಕ ದೇಶದ ಯುವ ಪ್ರತಿನಿಧಿಗಳು ಈ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಿದ್ದರು.

ಈ ಸಮಾವೇಶದಲ್ಲಿ ವಿಶ್ವಶಾಂತಿ ಹಾಗೂ ವಿಶ್ವ ಶಾಂತಿ ಕಾಪಾಡುವಲ್ಲಿ ಯುವಜನತೆಯ ಪಾತ್ರ ಹಾಗೂ ವಿಶ್ವ ಶಾಂತಿ ಸ್ಥಾಪಿಸುವಲ್ಲಿ ಭಾರತದ ದಿವ್ಯ ಹೆಜ್ಜೆಗಳ ಕುರಿತು ಸುದೀರ್ಘವಾಗಿ ತಮ್ಮ ವಿಚಾರಗಳನ್ನು ಪ್ರಸ್ತುತಪಡಿಸಿದರು.

ಇಂದು ದೇಶ-ದೇಶಗಳ ನಡುವೆ ದ್ವೇಷ ಭಾವನೆ ಬೆಳೆದು ಯುದ್ಧೋನ್ಮಾದ ಕಂಡು ಬರುತ್ತಿರುವುದು ವಿಶ್ವಶಾಂತಿಗೆ ಅಪಾಯದ ಸಂಗತಿ. ಈ ಎಲ್ಲ ಸಮಸ್ಯೆಗಳಿಗೆ ಶಾಂತಿ, ಸಹೋದರತೆಯೇ ಪರಿಹಾರವಾಗಿದೆ.

# ನವರಾತ್ರಿ: ಉಡಿ ತುಂಬುವ ಕಾರ್ಯಕ್ರಮ

**ಇಂಡಿ :** ಪಟ್ಟಣದ ಅಂಬಾಭವಾನಿ ದೇವಸ್ಥಾನ, ಅಂಬಾಭವಾನಿ ತರುಣ ಮಂಡಳಿ ಚಾವಡಿ ಓಣಿ, ಭುವನೇಶ್ವರಿ ತರುಣ ಮಂಡಳಿ ಕುಂಬಾರ ಓಣಿ, ದುರ್ಗಾ ಪರಮೇಶ್ವರಿ ತರುಣ ಮಂಡಳಿ ಬೀರಪ್ಪ ನಗರ ದಲ್ಲಿ ಮಹಿಳೆಯರಿಂದ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ಮಹಿಳೆಯರಿಗೆ ಎಲೆ,ಅಡಿಕೆ,ಕುಪ್ಪಸ, ಬಾಳೆಹಣ್ಣು, ಅಕ್ಕಿ ಮತ್ತು ಸಿಹಿ ಪದಾರ್ಥ ಕೊಟ್ಟು ಉಡಿ ತುಂಬಿದರು. ಕುಂಬಾರ ಓಣಿಯಲ್ಲಿ ರೇಣುಕಾ ಯಲ್ಲಮ್ಮಾ ಮಹಾತ್ಮೆ ನಾಟಕ ಪ್ರದರ್ಶನಗೊಂಡಿತು. ಜಮಖಂಡಿ ಹುಣಚ್ಯಾಳ ಗ್ರಾಮದ ಮತ್ತು ರಬಕವಿ



ಬನಹಟ್ಟಿಯವರಿಂದ ಚೌಡಕಿ ಪದಗಳು ಭರಾಟೆ ನಡೆಯಿತು. ಪ್ರತಿದಿನ ಎಲ್ಲ ಕಡೆ ಪೂಜೆ ಅಭಿಷೇಕ ದೇವಿಗೆ ಅಲಂಕಾರ ಪ್ರಸಾದ ವಿತರಣೆ ಕಾರ್ಯಕ್ರಮ ನಡೆಯುತ್ತಿವೆ.

# ವೋಟ್ ಚೋರಿ ಸಹಿ ಸಂಗ್ರಹಾ ಅಭಿಯಾನಕ್ಕೆ ರೋಣದಲ್ಲಿ ಚಾಲನೆ

**ರೋಣ:**ಪಟ್ಟಣದಅಕ್ಕಮಹಾದೇವಿಕಲ್ಯಾಣ ಮಂಟಪದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರೋಣ, ನರೇಗಲ್ ಹಾಗೂ ಡಂಬಳ ಬ್ಲಾಕ್ ಮಟ್ಟದ ಮತಗಳ್ಳತನ ಸಹಿ ಸಂಗ್ರಹಾ ಅಭಿಯಾನಕ್ಕೆ ಶಾಸಕ ಜಿ.ಎಸ್. ಪಾಟೀಲ ಬುಧವಾರ ಚಾಲನೆ ನೀಡಿದರು. ವೀಕ್ಷಕ ಎಚ್.ಎಸ್. ಸೋಂಪುರ ಮಾತನಾಡಿ, ಹಳ್ಳಿ, ಮನೆ, ಮನೆಗಳಿಗೆ ವೋಟ್ ಚೋರಿ (ಮತಗಳ್ಳತನ ) ಬಗ್ಗೆ ಜಾಗೃತಿ ಮೂಡಿಸಲು ಗದಗ ಜಿಲ್ಲೆಯಲ್ಲೆಡೆ ಸಹಿ ಸಂಗ್ರಹಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಆಳಂದ ಉಪಚುನಾವಣೆಯಲ್ಲಿ ಒಟ್ಟು 6500 ಮತಗಳು ವೋಟ್ ಚೋರಿ ಆಗಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೆಹಲಿಯಲ್ಲಿ ದಾಖಲೆ ಬಿಡುಗಡೆ ಮಾಡಿದ್ದಾರೆ. ಹೀಗಾಗಿ ಮತಗಳ್ಳತನ ತಡೆಯಲು ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ತಾಪಂ ಜಿಪಂ, ಗ್ರಾಪಂ ಪಕ್ಷ ಸದೃಢಗೊಳಿಸಲು ಅನುಕೂಲವಾಗುತ್ತದೆ ಎಂದರು. ಚುನಾವಣೆಯಲ್ಲಿ ಅಭಿಯಾನ ರೋಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಶೆಟ್ಟರ್ ಮಾತನಾಡಿ, ಇಡೀ ದೇಶದಲ್ಲೇ ಇದೊಂದು ದೊಡ್ಡ ಅಭಿಯಾನವಾಗಿದೆ. ಎಲ್ಲ ಬ್ಲಾಕ್ಗಳ ಬಿಲ ಬಿಎಲ್ಎ ಏಜೆಂಟರು ಇಂದಿನಿಂದಲೇ ಸಹಿ ಸಂಗ್ರಹ ಅಭಿಯಾನಕ್ಕೆ ಮುಂದಾಗಬೇಕು. ಒಂದೊಂದು ಬ್ಲಾಕ್ಗಳಲ್ಲಿ 25 ಸಾವಿರ ಸಹಿ ಸಂಗ್ರಹಗಳಾಗುತ್ತವೆ. ಮೂರುಬ್ಲಾಕ್ಗಳುಸೇರಿ1ಲಕ್ಷಕ್ಕಿಂತಲೂಹೆಚ್ಚು ಸಹಿಸಂಗ್ರಹಮಾಡುವವ್ಯವಸ್ಥೆಯಾಗಬೇಕು ಎಂದರು.

ಕೆಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಐ.ಎಸ್. ಪಾಟೀಲ, ಹಿರಿಯ ವಕೀಲ ವಿ.ಆರ್. ಗುಡಿಸಾಗರ, ಶರಣಗೌಡ ಪಾಟೀಲ, ಪರಶುರಾಮ ಅಳಗವಾಡಿ, ದಶರಥ ಗಾಣಗೇರ, ಪ್ರಭು ಮೇಟಿ, ಉಮೇಶ ಹೂಗಾರ, ಶಿವರಾಜ ಘೋರ್ಪಡೆ,

ಸಾಂಗ್ಲಿಕರ, ಅಶೋಕ ಬಾಗಮಾರ, ಅಕ್ಷಯ ಪಾಟೀಲ, ಶರಣಪ್ಪ ಬೆಟಗೇರಿ, ಯಚ್ಚರಗೌಡ ಗೋವಿಂದಗೌಡ್ರ, ಬಸವರಾಜ ನವಲಗುಂದ, ವಿಶ್ವನಾಥ ಜಿಡ್ಡಿಬಾಗಿಲ, ಹನುಮಂತಪ್ಪ ದ್ವಾಸಲ, ದುರಗಪ್ಪ ಹಿರೇಮನಿ, ಮಂಜುಳಾ ರೇವಡಿ, ನಾಜಬೇಗಂ ಯಲಿಗಾರ, ಮಂಜುಳಾ ಹುಲ್ಲಣ್ಣವರ, ರೂಪಾ ಅಂಗಡಿ, ಮಲ್ಲು ಬೇವಿನಮರದ, ಸಂಜಯ್ ದೊಡ್ಡಮನಿ, ಹನುಮಂತ ತಳ್ಳಿಕೇರಿ, ಇತರರು ಇದ್ದರು.

# ಗುರು ಕಾರುಣ್ಯವೂ ಸ್ಪರ್ಸಮಣಿ: ಅಭಿನವ ಕೊಟ್ಟೂರೇಶ್ವರ ಮಹಾಸ್ವಾಮಿಗಳು



**ಗದಗ :** ಪರಮಪೂಜ್ಯ ಪದ್ಮ ಭೂಷಣ, ಡಾ ಪಂಡಿತ ಪುಟ್ಟರಾಜ ಗವಾಯಿಗಳವರ 15 ನೇ ಪುಣ್ಯಾರಾದನೆ, ಹಾಗೂ ನಾದಶ್ರೀ ಸಂಗೀತ ಪಾಠಶಾಲೆ ವಾರ್ಷಿಕೋತ್ಸವ, ಗಾನಗಂದ ವ್ರ ಕಲಾ ಟ್ರಸ್ಟ್ ಗದಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರ ಇವರ ಸಹಯೋಗದಲ್ಲಿ ನಡೆಯಿತು.

ದಿವ್ಯ ಸಾನಿದ್ಯವನ್ನು ಪೂಜ್ಯ ಶ್ರೀ ಮನಿಪ್ರ ಡಾ ಕೊಟ್ಟೂರೇಶ್ವರ ಮಹಾಸಾಗರ ದಿವ್ಯ ಸಾನಿದ್ಯ ಹಾಗೂ ಪೂಜ್ಯ ಶ್ರೀ ವೀರೇಶ್ವರ ಶರಣರ ಸಮ್ಮುಖದಲ್ಲಿ ನಡೆಯಿತು.

ಕಾರ್ಯಕ್ರಮ ವನ್ನು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಪೊಲೀಸ ಇನ್ಸ್ಪೇಕ್ಟರ ಮಾರುತಿ ಎಸ್ ಜಗದಂಡಕರ ಉದ್ಘಾಟಿಸಿ ಮಾತನಾಡಿ,ಆಟೋ ಡ್ರೈವರ್ ಆಗಿದ್ದ ನಾನು ಇಂದು ರಾಷ್ಟ್ರ ಪ್ರಶಸ್ತಿ ಪಡೆದು ಪಿ ಎಸ್ ಐ ಆಗಿ ನಿಮ್ಮ. ಮುಂದೆ ನಿಂತಿದ್ದೇನೆ ಇದಕ್ಕೆ ಕಾರಣ ನನ್ನಲ್ಲಿದ್ದ ಸ್ಪಷ್ಟ ಗುರಿ, ಅಚಲ ನಿರ್ಧಾರ, ಹಾಗೂ ಕಠಿಣ ಶ್ರಮ ಲಕ್ಷ ಲಕ್ಷ ಖರ್ಚು ಮಾಡಿ ಮನೆ ಕಟ್ಟಿಸುವ ನೀವು ಸಾವಿರಾರು ರೂಪಾಯಿ ಸಿ ಸಿ ಕ್ಯಾಮೆರಾ ಅಳವಡಿಸಲು ಹಿಂಜರಿಯಬೇಡಿ ಇದು ನಿಮ್ಮ ರಕ್ಷಣೆ ಅಪರಾಧ ಪತ್ತೆ ಹಚ್ಚಲು ತುಂಬಾ ಅವಶ್ಯಕವಾಗಿದೆ ಎಂದು ಹೇಳಿದರು.

ಇದೆ ವೇಳೆ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಪೊಲೀಸ ಇನ್ಸ್ಪೇಕ್ಟರ ಮಾರುತಿ ಎಸ್ ಜಗದಂಡಕರ ಸನ್ಮಾನಿಸಲಾಯಿತು.

ಕುಮಾರ ಗುಡಿ ಭರತ ರಿಂದ ಗಾಯನ, ಕುಮಾರಿ ವರ್ಷ ಕಲಕಂಬಿ ಯವರಿಂದ ಭರತ ನಾಟ್ಯ, ಹಾಗೂ ನಾದ ಶ್ರೀ ಸಂಗೀತ ಪಾಠಶಾಲೆ ಮಕ್ಕಳಿಂದ ವಚನ ಗಾಯನ ನೃತ್ಯ ಪ್ರದರ್ಶನ ಗಳು ಆಕರ್ಷಕವಾಗಿ ನಡೆದವು,

ಪೂಜ್ಯ ಮನೀಪ್ರ ಅಭಿನವ ಡಾ ಕೊಟ್ಟೂರೇಶ್ವರ ಮಹಾಸ್ವಾಮಿಗಳು ಗುರು ಕಾರುಣ್ಯ ಎಂಬುವುದು ಸ್ಪರ್ಶ ಮಣಿಯಂತೆ ಗವಾಯಿಗಳವರ ಕಾರುಣ್ಯ ಬಿಕ್ಷಾ ಪಾತ್ರೆ ಹಿಡಿಯಬೇಕಿದ್ದ ಕೈಗಳು ಸಂಗೀತ ವಾದ್ಯ ಹಿಡಿದು ಸ್ವಾಭಿಮಾನದ ಬದುಕು ಹಿಡಿದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಮೇಶ, ದ್ರುವಕುಮಾರ,ಅಂಬಾದಾಸ, ಬಸಪ್ಪ ಗುಡಿಮನಿ, ಕಲಾವಿದ ಇದ್ದರು.

ಸಿದ್ದಲಿಂಗ ಸ್ವಾಮಿ ಗಡ್ಡದಮಠ ಸ್ವಾಗತಿಸಿದರು. ಕುಮಾರ ಶಿವಯೋಗಿ ಗಡ್ಡದಮಠ ನಿರೂಪಿಸಿದರು. ಕುಮಾರಸ್ವಾಮಿ ಹಿರೇಮಠ ವಂದಿಸಿದರು.

# ಗ್ರಾಮಗಳ ಸುಧಾರಣೆ ಹಾಗೂ ಗ್ರಾಮಗಳ ನೈರ್ಮಲ್ಯ ಗಾಂಧಿಜೀಯವರ ಕನಸಾಗಿತ್ತು: ಸಿ ಸಿ ಪಾಟೀಲ್

**ರೋಣ :** ಗ್ರಾಮಗಳ ಅಭಿವೃದ್ಧಿ, ಗ್ರಾಮಗಳ ಸುಧಾರಣೆ ಹಾಗೂ ಗ್ರಾಮಗಳ ನೈರ್ಮಲ್ಯ ಗಾಂಧಿಜೀಯವರ ಕನಸಾಗಿತ್ತು. ಇಂದು ಅವರ ಕನಸು ನನಸು ಮಾಡುವ ದೃಷ್ಟಿಯಿಂದ ನಮ್ಮ ಕ್ಷೇತ್ರದ ಗ್ರಾಮಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡುತ್ತಿದ್ದೇನೆ ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಸನ್ 2020-21ನೇ ಸಾಲಿನ ನರೇಗಾ ಯೋಜನೆಯ 15ನೇ ಹಣಕಾಸು ಯೋಜನೆಯಡಿಗುರುವಾರಅಮರಗೋಳ ಗ್ರಾಮ ಪಂಚಾಯಿತಿ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕರು ಹಾಗೂ ಗ್ರಾಪಂ ಅಧ್ಯಕ್ಷ, ಸದಸ್ಯರ ಹೆಸರು ಆಶ್ರಯ ಮನೆ ಹಂಚಿಕೆಯಿಂದ ಹಾಳಾಗುತ್ತಿದೆ. ಉಳ್ಳವರಿಗೆ ಮಾತ್ರ ಮತ್ತೆ ಮತ್ತೆ ಆಶ್ರಯ ಮನೆಗಳನ್ನು ಮಂಜೂರು ಮಾಡಲಾಗುತ್ತಿದೆ. ಗ್ರಾಪಂ ಅಧ್ಯಕ್ಷ ಹಾಗೂ ಸದಸ್ಯರು ನಿಜವಾಗಿಯೂ ಆಶ್ರಯ ಇಲ್ಲದವರಿಗೆ ಮನೆ ನೀಡಿದರೆ ನಿಮ್ಮ ಆಡಳಿತಕ್ಕೊಂದು ಬೆಲೆ ಬರುತ್ತದೆ ಎಂದು ತಿಳಿಸಿದರು.

ಗ್ರಾಮಗಳ ಸ್ಥಳಾಂತರ ಶ್ರೇಯ:
ನಾನು ಸಚಿವನಾಗಿದ್ದ ಸಂದರ್ಭದಲ್ಲಿ ನನ್ನ ಕ್ಷೇತ್ರದ ಅದರಲ್ಲೂ ವಿಶೇಷವಾಗಿ ಹೊಳೆಆಲೂರ ಭಾಗದಲ್ಲಿ ಮಲಪ್ರಭಾ ನದಿಯ ನೆರೆ ಬಂದು 14 ಗ್ರಾಮಗಳ ಜನರು ಸಂದಿಗ್ಧ ಸ್ಥಿತಿಯಲ್ಲಿದ್ದರು. ಕೆಲವರು ದೇವಸ್ಥಾನದ ಮೇಲೆ ಹತ್ತಿ ತಮ್ಮ ಆತ್ಮ ರಕ್ಷಣೆ ಮಾಡಿಕೊಂಡಿದ್ದರು. ಇದನ್ನು ಅರಿತು ಅಂದೇಸಂಜೆ2ಹೆಲಿಕಾಪ್ಟರ್ಮೂಲಕಜನರನ್ನು ಸ್ಥಳಾಂತರ ಮಾಡಿದ್ದೆ. ಮುಂದುವರಿದು



14 ಗ್ರಾಮಗಳನ್ನು ನವ ಗ್ರಾಮ ಗುರುತಿಸಿ ಸ್ಥಳಾಂತರ ಮಾಡಿದ್ದೇನೆ. ಇದನ್ನು ಕಂಡ ಆಗಿನ ಸಿಎಂ ಯಡಿಯೂರಪ್ಪ ಅವರು ಒಟ್ಟು 300 ಗ್ರಾಮಗಳ ಸ್ಥಳಾಂತರಕ್ಕೆ ಒಪ್ಪಿಗೆ ನೀಡಿದ್ದರು. ನರಗುಂದ ಕ್ಷೇತ್ರದಿಂದ ನೂತನ ಗ್ರಾಮಗಳ ಸ್ಥಳಾಂತರಕ್ಕೆ ನಾಂದಿ ಹಾಡಿತು ಎಂದು ಸ್ಮರಿಸಿದರು.

ಇನ್ನುಬಸವರಾಜಬೊಮ್ಮಾಯಿಅವರುಸಿಎಂ ಆಗಿದ್ದ ವೇಳೆ ನನಗೆ ಲೋಕೋಪಯೋಗಿ ಇಲಾಖೆ ಸಚಿವನಾಗುವ ಅವಕಾಶ ಒದಗಿ ಬಂದಿತು. ಆ ವೇಳೆ ಕ್ಷೇತ್ರದ ಎಲ್ಲ ರಸ್ತೆಗಳನ್ನು ನೂತನವಾಗಿ ನಿರ್ಮಿಸಿದ್ದೇನೆ. ಲೋಕೋಪಯೋಗಿ ಸಚಿವನಾಗಿದ್ದಾಗ ನರಗುಂದ ಕ್ಷೇತ್ರಕ್ಕೆ ಒಟ್ಟು 1860 ಕೋಟಿ

**ಅರೆಹುಚ್ಚರ ಜತೆ ಗುದ್ದಾಡಬಾರದು ಅತೀ ಬುದ್ಧಿವಂತರ ಜೊತೆ**
**ಮಾತನಾಡಬಹುದು. ಇಲ್ಲ ಅತೀ ದಡ್ಡರ ಜೊತೆ ಮಾತನಾಡಬಹುದು. ಆದರೆ, ಶಾಣ್ಯಾನು ಅಲ್ಲ ದಡ್ಡನೂ ಅಲ್ಲದವರ ಜತೆ ಮಾತನಾಡಬಾರದು ಎಂದು ಮಾಜಿ ಶಾಸಕ ಬಿ.ಆರ್. ಯಾವಗಲ್ಲ ಅವರ ಕುರಿತು ಟೀಕಿಸಿದರು.**

ಅನುದಾನ ತಂದು ಕೆಲಸ ಮಾಡಿಸಿದ್ದೇನೆ ಎಂದರು.

ಈಗ ಕಾಂಗ್ರೆಸ್ ಸರ್ಕಾರ ಇದ್ದರೂ ನನ್ನ ವರ್ಚಸ್ಸು ಹಾಗೂ ಸಿಎಂ ಸಿದ್ದರಾಮಯ್ಯ ಅವರೊಂದಿಗಿನಒಡನಾಟಉತ್ತಮವಾಗಿದೆ. ಹೀಗಾಗಿನನ್ನಕ್ಷೇತ್ರಕ್ಕೆ100ಕೋಟಿಅನುದಾನ ಬಿಡುಗಡೆ ಮಾಡಿಸಿದ್ದೇನೆ ಎಂದರು.

ತಾಪಂ ಇಒ ಚಂದ್ರಶೇಖರ ಕಂದಕೂರ ಮಾತನಾಡಿ, ರೋಣ ತಾಲೂಕಿನಲ್ಲೇ ಅಮರಗೋಳದಲ್ಲಿ ಸುಸಜ್ಜಿತ ಗ್ರಾಪಂ ಕಟ್ಟಡ ನಿರ್ಮಾಣವಾಗಿದೆ ಎಂದರು.

ಗ್ರಾಪಂ ಸದಸ್ಯ ಪವಾಡೆಪ್ಪ ಹವಾಜಿ ಮಾತನಾಡಿ, ಅಮರಗೋಳ ಗ್ರಾಪಂ ವ್ಯಾಪ್ತಿಯ ಕುರುವಿನಕೊಪ್ಪದಲ್ಲಿ ನೆರೆ ಬಂದಾಗ ಜನರ ಸಂಕಷ್ಟ ಅರಿತು ನಮ್ಮ ನೆರವಿಗೆ ಧಾವಿಸಿದ್ದರು. ನೆರೆ ಪರಿಹಾರ ಒದಗಿಸಿ ರಸ್ತೆ ಅಭಿವೃದ್ಧಿಪಡಿಸಿದ್ದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

# ಕ್ರೀಡಾಕೂಟದಲ್ಲಿ ಸನ್ಮಾರ್ಗ ಮಹಾವಿದ್ಯಾಲಯದ ಸಾಧನೆ

**ಗದಗ :** 2025-2026 ನೇ ಸಾಲಿನ ಗದಗ ತಾಲೂಕಾ ಮಟ್ಟದ ‘ಬಿ’ ವಲಯದ ಪದವಿ ಪೂರ್ವ ಮಹಾವಿದ್ಯಾಲಯಗಳ ಕ್ರೀಡಾಕೂಟವು ಶ್ರೀ ಜಗದ್ಗುರು ಬೂದೀಶ್ವರ ವಿದ್ಯಾಪೀಠದ ಪದವಿ ಪೂರ್ವ ಮಹಾವಿದ್ಯಾಲಯ ಹೊಸಹಳ್ಳಿಯಲ್ಲಿ ಜರುಗಿತು.

ಈ ಕ್ರೀಡಾಕೂಟದ ಅಥ್ಲೇಟಿಕ್ಸ್ ವಿಭಾಗದಲ್ಲಿ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ವಾಣಿಜ್ಯ ವಿದ್ಯಾರ್ಥಿ ಕುಮಾರ : ಶಿವಯೋಗಿ ಕಮತರ 800ಮೀ ಹಾಗೂ 1500ಮೀ ಓಟದಲ್ಲಿ ತಾಲೂಕಾ ಮಟ್ಟಕ್ಕೆ ಪ್ರಥಮ ಸ್ಥಾನವನ್ನು ಹಾಗೂ ಕ್ರಾಸ್ ಕಂಟ್ರಿ ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಲ್ಲದೆ, ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕುಮಾರಿ ವೀಣಾ ದೂಳಾ ಯೋಗದಲ್ಲಿ ತಾಲೂಕಾ ಮಟ್ಟಕ್ಕೆ ಪ್ರಥಮ ಸ್ಥಾನವನ್ನು ಗಳಿಸಿದ್ದಾಳೆ, ಅದೇ ರೀತಿ ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕುಮಾರಿ ಶಿವಾನಿ ಕವಟೀಕರ ಗುಂಡು ಎಸೆತ ಹಾಗೂ ಚಕ್ರ ಎಸೆತದಲ್ಲಿ ತೃತೀಯ ಸ್ಥಾನ ಪಡೆದಿದ್ದಾಳೆ ದ್ವಿತೀಯ ವರ್ಷದ ವಿಜ್ಞಾನ ವಿದ್ಯಾರ್ಥಿನಿಯಾದ ಕುಮಾರಿ ವೀಣಾ ಧೂಳಾ ತಾಲೂಕ ಮಟ್ಟದ ಯೋಗ ಕ್ರೀಡೆಯಲ್ಲಿ ಮೊದಲ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

ತ್ರಿವಿಧ ಜಿಗಿತದಲ್ಲಿ ನಮ್ಮ ಕಾಲೇಜಿನ ಪ್ರಥಮ ವಾಣಿಜ್ಯ ವಿದ್ಯಾರ್ಥಿನಿ ಕುಮಾರಿ ತಂಜುಮ ಇಸ್ಮಾಯಿಲ್ನವರ ತೃತೀಯ ಸ್ಥಾನ ಪಡೆದಿದ್ದಾಳೆ.

“SIHI KAHI” Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State